# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ಏಪ್ರಿಲ್ 1-30 2017**

KANNADA MONTHLY APRIL 1-30 2017

ಸಂಪುಟ 2, ಸಂಚಿಕೆ 8 ಪುಟ : 24, ಬೆಲೆ : ರೂ. 5–00

Vol. 2, Issue 8, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...

| | |
|---|---|
| ಏಪ್ರಿಲ್ 1 ಮೂರ್ಖರ ದಿನ | Pg. No. 4 |
| ರಾಮನಾಮದ ಮಹಿಮೆ | Pg. No. 5 |
| ಇಂಗ್ಲೀಷರ ಚೌಚೌ | Pg. No. 7 |
| ಸೀಬೆ ಫೇಸ್ ಪ್ಯಾಕ್ | Pg. No. 18 |
| ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ | Pg. No. 20 |
| ಬೆರಗು ಹುಟ್ಟಿಸುವ ಬೇಸಿಗೆ ಅರಮನೆ | Pg. No. 21 |

**ನಾಡಿನ ಜನತೆಗೆ ಮಹಾವೀರ, ಅಂಬೇಡ್ಕರ್, ಬಸವೇಶ್ವರ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಪ್ರಯುಕ್ತ ಶುಭಾಶಯಗಳು**





## ವಿಜೃಂಭಣೆಯ ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿ ಜಾತ್ರೆ



ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ಜಾತ್ರೆ ದಿನಾಂಕ 16–3–2017ರಂದು ನಡೆಯಿತು. ಪ್ರತಿ ವರ್ಷದಂತೆ ಜಾತ್ರೆ ಹಾಗೂ ರಾತ್ರಿಯ ತೇರಡಿ ಉತ್ಸವಕ್ಕೆ ಭಕ್ತಾದಿಗಳು ಸಕಾಲದಲ್ಲಿ ಬಂದಿದ್ದು ದೇವರ ಕೃಪೆಗೆ ಪಾತ್ರರಾಗಿ ಊರಿನ ಹಬ್ಬವನ್ನು ವಿಜೃಂಭಣೆಯಿಂದ ನೆರವೇರಿಸಿದ್ದಕ್ಕೆ ಎಲ್ಲರಿಗೂ ಸಹಕಾರ ನೀಡಿದ್ದಕ್ಕೆ ಕೃತಜ್ಞತೆಯನ್ನು ದೇವಸ್ಥಾನದ ಪಾರುಪತ್ತೇಗಾರರಾದ ಶ್ರೀ ಜಯರಾಂ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಕ್ಷಿಣ ಕಾಶಿ ನಂಜನಗೂಡು ಶ್ರೀಕಂಠೇಶ್ವರ ರಥೋತ್ಸವ ದಿ. 7–4–2017ರಂದು ಜರುಗಲಿದೆ.



## ನನ್ನ ಮಾತು



ಹೆಣ್ಣು ಬಾಲ್ಯದಲ್ಲಿ ತಂದೆಯಿಂದ, ಯೌವ್ವನದಲ್ಲಿ ಗಂಡನಿಂದ, ವೃದ್ಧಾಪ್ಯದಲ್ಲಿ ಪುತ್ರನಿಂದ ರಕ್ಷಣೆಯನ್ನು ಪಡೆಯುವಳು. ಅದಕ್ಕಾಗಿಯೇ ಮನು ಸ್ತ್ರೀಯರು ಪರರ ಅಧೀನರು, ಸ್ವಾತಂತ್ರ್ಯ ಹೊಂದಿರುವುದಕ್ಕೆ ಅರ್ಹರಲ್ಲಎಂದು ಕಟುವಾಗಿ ಹೇಳಿದ್ದಾನೆ. ಮನು ಒಂದರ್ಥದಲ್ಲಿ ಸ್ತ್ರೀಯ ದ್ವೇಷಿಯಾಗಿರಲಿಲ್ಲವೆಂದು ಹೇಳಬಹುದು.

ಮನು ಸ್ತ್ರೀಯರು ಪರರ ಅಧೀನರು ಎಂದು ಒಪ್ಪಿಕೊಂಡು ಸ್ವಲ್ಪ ಕಾಲಾನಂತರ ಯತ್ರ ನಾರ್ಯಸ್ತು ಪೂಜ್ಯಂತೇ । ತತ್ರ ರಮಂತೇ ದೇವತಾಃ ಯಾವ ನಾಡಿನಲ್ಲಿ ಮಹಿಳೆಯರು ಪೂಜಿಸಲ್ಪಡುತ್ತಾರೆಯೋ ಅಲ್ಲಿ ದೇವಾನು ದೇವತೆಗಳು ವಾಸಿಸುತ್ತಾರೆ ಎಂದು ಹೇಳಿದೆ. ಅಂದಿನಿಂದ ಮಹಿಳೆಯರನ್ನು ಎಲ್ಲರೂ ಪೂಜ್ಯ ಭಾವನೆಯಿಂದ ಕಾಣಹತ್ತಿದರು. ಯಹೂದಿ ಕುರಾನಿನಲ್ಲಿ God could not be everywhere. Therefore he created mothers. ದೇವರಿಗೆ ಎಲ್ಲ ಕಡೆಗೂ ಇರಲಿಕ್ಕೆ ಸಾಧ್ಯವಾಗಲಿಲ್ಲವಂತೆ ಅದಕ್ಕೆ ತಾಯಂದಿರನ್ನು ಸೃಷ್ಟಿಸಿದ್ದಾನೆ ಎಂದು ಹೇಳಿದೆ.

ವೇದಕಾಲದಲ್ಲಿ ಮಹಿಳೆಯರು ಉಪನಯನಕ್ಕೆ ಅರ್ಹಳಾಗುತ್ತಿದ್ದಳು. ಬೌದ್ಧಕಾಲದಲ್ಲಿ ಮಹಿಳೆಯರು ಬೌದ್ಧ ಸಂಘಗಳಲ್ಲಿ ಬೌದ್ಧ ಭಿಕ್ಷುಣಿಯರಾಗಿದ್ದರು. ರಾಜ ಮಹಾರಾಜರ ಕಾಲದಲ್ಲಿ ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಬೆಳವಣಿ ಮಲ್ಲಮ್ಮ ಮುಂತಾದ ವೀರ ಹೋರಾಟಗಾರರು ಹೆಸರಾಗಿ ಹೋಗಿದ್ದಾರೆ. ಕೈಗಾರಿಕಾ ಕ್ರಾಂತಿ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಮಹಿಳೆಯರು ಪಾಲ್ಗೊಂಡಿದ್ದರು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಲ್ಲಿ 15 ಸಾವಿರ ಮಹಿಳೆಯರು ಭಾಗವಹಿಸಿ ಕೀರ್ತಿಯನ್ನು ಪಡೆದಿದ್ದಾರೆ.

*ಸಂಪಾದಕ*
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ಏಪ್ರಿಲ್, 1-30 2017**

KANNADA MONTHLY

APRIL 1-30 2017

ಸಂಪುಟ 2, ಸಂಚಿಕೆ 8, ಪುಟ: 24
Price/ಬೆಲೆ : ರೂ. 5-00
Vol. 2, Issue 8, Pages: 24

ಮುಖಪುಟ:
**ಕೇರಳದ ವಿಶೇಷ ತಿಂಡಿ**
**ಪುಟ್ಟು ಕಡಲೆ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803-34444

ಉಪಸಂಪಾದಕರು:
**ಎಸ್.ವೆಂಕಟರವಣಪ್ಪ**
**ಸಾವಿತ್ರಿ ಎಂ.ಸಿ.**

ಕಛೇರಿ ವಿಳಾಸ:
ನಂ. 136, ಶ್ರೀ ನೀಲಕಂಠ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲ,
ಮೈಸೂರು-570 004.
E-mail: mahilavishesha@yahoo.com
Web: www.mahilavishesha.in





# ಏಪ್ರಿಲ್ ಒಂದು ಮೂರ್ಖರ ದಿನ

ವಿಶ್ವಾದ್ಯಂತ ಅನೇಕ ಶತಮಾನಗಳಿಂದಲೂ ಜನರು ಕೆಲವು ಸಂಪ್ರದಾಯಗಳನ್ನು ಮತ್ತು ಪದ್ಧತಿಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಪದ್ಧತಿಗಳು ಹೇಗೆ ಆರಂಭವಾದವು ಎಂಬುದು ಸರಿಯಾಗಿ ತಿಳಿದು ಬಂದಿಲ್ಲ. ಆದರೂ ಏಪ್ರಿಲ್ ಒಂದನೇ ತಾರೀಖು ವಿಶೇಷ ಮಹತ್ವ ಪಡೆದಿದೆ. ಹೆಚ್ಚು ಕಡಿಮೆ ವಿಶ್ವದ ಎಲ್ಲಾ ಭಾಗಗಳಲ್ಲೂ ಈ ದಿನವನ್ನು ಮೂರ್ಖರ ದಿನವೆಂದು ಪರಿಗಣಿಸಲಾಗಿದೆ.

ಈ ದಿನ ಸ್ನೇಹಿತರು ಮತ್ತು ಅಕ್ಕಪಕ್ಕದವರು, ಕಪಟ ತಂತ್ರಗಳಿಂದ ಯಾರಾದರೂ ಬೇಸ್ತು ಬೀಳುವಂತೆ ಮಾಡುತ್ತಾರೆ. ಈ ಸಂದರ್ಭದಲ್ಲಿ ನಕಲಿ ಉಡುಗೊರೆಗಳನ್ನು ಕಳಿಸುವುದು ಹಾಗೂ ಊಟ-ತಿಂಡಿಗಳಿಗೆ ಆಹ್ವಾನಿಸಿ ಅದನ್ನು ನಂಬಿ ಬಂದವರನ್ನು ಮೂರ್ಖರನ್ನಾಗಿ ಮಾಡುವುದು, ಇಂತಹ ಪ್ರಕರಣಗಳು ಸಾಮಾನ್ಯ. ಏಪ್ರಿಲ್ ಒಂದನ್ನು ಮೂರ್ಖರ ದಿನವೆಂದು ಪರಿಗಣಿಸಲು ಕಾರಣವೇನು? ಏಪ್ರಿಲ್ ಒಂರಂದು ಯಾರನ್ನಾದರೂ ಮೂರ್ಖರನ್ನಾಗಿ ಮಾಡಲು ಹುಸಿತಂತ್ರಗಳನ್ನು ಹೂಡುವ ಪದ್ಧತಿ 1564ರಲ್ಲಿ ಫ್ರಾನ್ಸ್‌ನಲ್ಲಿ ಆರಂಭವಾಯಿತು. 1564ಕ್ಕೆ ಮುಂಚೆ, ಇಡೀ ಯೂರೋಪಿನಲ್ಲಿ ಒಂದೇ ಕ್ಯಾಲೆಂಡರ್ ಬಳಕೆಯಲ್ಲಿತ್ತು. ಆ ಕ್ಯಾಲೆಂಡರ್ ಪ್ರಕಾರ, ಹೊಸ ವರ್ಷ ಏಪ್ರಿಲ್ ಒಂದರಂದು ಪ್ರಾರಂಭವಾಗಿತ್ತು. ಆದ್ದರಿಂದ ಆ ದಿನವನ್ನು ಹೊಸ ವರ್ಷದ ದಿನವನ್ನಾಗಿ ಆಚರಿಸಲಾಗುತ್ತಿತ್ತು. ಆ ದಿನ ಜನರು ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕೊಡುವುದು ಮತ್ತು ಒಬ್ಬರ ಮನೆಗೆ ಒಬ್ಬರು ಭೇಟಿ ಕೊಡುವುದು ವಾಡಿಕೆಯಾಗಿತ್ತು.

ಆದರೆ 1564ರಲ್ಲಿ, ಫ್ರಾನ್ಸ್‌ನ ದೊರೆ ಹತ್ತನೇ ಚಾರ್ಲ್ಸ್, ಸುಧಾರಿತ ಕ್ಯಾಲೆಂಡರ್ ಒಂದನ್ನು ಅನುಸರಿಸಬೇಕೆಂದು ಜನರಿಗೆ ಆಜ್ಞಾಪಿಸಿದ. ಈ ಹೊಸ ಕ್ಯಾಲೆಂಡರ್ ಪ್ರಕಾರ ಹೊಸ ವರ್ಷ ಜನವರಿ 1ನೇ ತಾರೀಖಿನಿಂದ ಪ್ರಾರಂಭವಾಯಿತು. ಹೆಚ್ಚು ಜನರು ಈ ಹೊಸ ವರ್ಷ ಆರಂಭವಾಗುವುದನ್ನು ಒಪ್ಪಿಕೊಳ್ಳಲಿಲ್ಲ.

ಈ ಹಠಮಾರಿಗಳು ಏಪ್ರಿಲ್ ಒಂದರಂದೇ ಹೊಸ ವರ್ಷದ ದಿನವನ್ನು ಆಚರಿಸುತ್ತಿದ್ದರಿಂದ, ಅವರನ್ನು ಜನರು ಗೇಲಿ ಮಾಡುತ್ತಿದ್ದರು. ಅವರ ಸುತ್ತಮುತ್ತಲೂ ಇದ್ದ ಜನರು ಏನಾದರೊಂದು ತಂತ್ರ ಹೂಡಿ, ಆ ದಿನ ಅವರು ಬೇಸ್ತು ಬೀಳುವಂತೆ ಮಾಡುತ್ತಿದ್ದರು. ಈ ರೀತಿ ಆ ಕೆಲವು ಜನರು ಏಪ್ರಿಲ್ ಮೂರ್ಖರು ಎಂದು ಕರೆಸಿಕೊಂಡರು. ಹೀಗೆ ಏಪ್ರಿಲ್ ಒಂದು ಮೂರ್ಖರ ದಿನವೆಂದು ಈವರೆಗೂ ಹೆಸರುವಾಸಿಯಾಗಿದೆ.

*ಶ್ರೀಮತಿ ರೂಪಾ ರಾವ್, ಬೆಂಗಳೂರು*

# ರಾಮನಾಮದ ಮಹಿಮೆ



ಮಹರ್ಷಿ ವಾಲ್ಮೀಕಿ ಮೊದಲಿಗೆ ರಚಿಸಿದ ರಾಮಾಯಣ ಮಹಾಕಾವ್ಯದಲ್ಲಿ ಒಂದು ಕೋಟಿ ಶ್ಲೋಕಗಳಿತ್ತಂತೆ. ನಂತರ ಅದು 24 ಸಾವಿರ ಆಯಿತು ಎಂದು ಹೇಳುತ್ತಾರೆ. ಹೀಗೆ ವಾಲ್ಮೀಕಿ ಮಹರ್ಷಿಗಳು ಮಹಾಕಾವ್ಯ ರಚಿಸಿದಾಗ ಅದು ಯಾರಿಗೆ ಅರ್ಪಣೆಯಾಗಬೇಕು? ಎಂಬ ಚಿಂತನ ಮಂಥನಗಳು ಶುರುವಾಯಿತಂತೆ. ಆಗ ದೇವತೆಗಳು ಮತ್ತು ರಾಕ್ಷಸರ ನಡುವೆ ವಾಗ್ಯುದ್ಧ ಶುರುವಾಯಿತು. ಆ ಮಹಾಕಾವ್ಯ ತಮಗೇ ಸೇರಬೇಕೆಂಬುದು ಇಬ್ಬರ ವಾದ. ದಿನಗಳೇ ಉರುಳಿದರೂ ವಾದ ಮುಂದುವರಿಯಿತೇ ಹೊರತು ಸಮಸ್ಯೆಗೆ ಉತ್ತರ ದೊರಕಲೇ ಇಲ್ಲ. ಕೊನೆಗೆ ವಾಲ್ಮೀಕಿ ಮಹರ್ಷಿಗಳೇ ಮಹಾಕಾವ್ಯವನ್ನು ಮೂವರಿಗೂ ಹಂಚಲು ನಿರ್ಧರಿಸಿದರು. ಅದರಂತೆ ದೇವತೆಗಳಿಗೆ 33 ಲಕ್ಷ, ಮನುಷ್ಯರಿಗೆ 33 ಲಕ್ಷ, ಅಸುರರಿಗೆ 33 ಲಕ್ಷ ಕೊಟ್ಟರು. ಕೊನೆಗೆ ಉಳಿದ ಒಂದು ಲಕ್ಷ ಶೋಕಗಳನ್ನು ಮೂರರಿಂದ ಭಾಗಿಸುತ್ತ ಹೋದರು. ಹೀಗೆ ಎಲ್ಲವನ್ನೂ ವಿತರಿಸಿದ ನಂತರ ಕೊನೆಗೆ ಒಂದು ಶ್ಲೋಕ ಮಾತ್ರ ಉಳಿಯಿತು. ಆ ಶ್ಲೋಕದಲ್ಲಿ ಸೋಜಿಗವೆನ್ನುವಂತೆ 32 ಅಕ್ಷರಗಳಿದ್ದವು. ಅದನ್ನೂ ಮೂರು ಭಾಗವನ್ನಾಗಿ ಹಂಚಿದರು. ಕೊನೆಗೆ ಉಳಿದದ್ದು ಎರಡು ಅಕ್ಷರಗಳು. ರಾ ಮತ್ತು ಮ. ಹೀಗೆ ಹಂಚಲಾಗದೇ ಉಳಿದ ಎರಡು ಅಕ್ಷರಗಳನ್ನು ಏನು ಮಾಡುವುದೆಂದು ವಾಲ್ಮೀಕಿ ಮಹರ್ಷಿಗಳು ಯೋಚಿಸಿದರು. ಕೊನೆಗೆ ಅದನ್ನು ಶಿವ ಮತ್ತು ಪಾರ್ವತಿಗೆ ನೀಡಿದರಂತೆ. ಹೀಗೆ ರಾಮಾಯಣ ಮಹಾಕಾವ್ಯದ ಎಲ್ಲಾ ಸಾರವೂ ಆ ಎರಡು ಅಕ್ಷರಗಳಲ್ಲೇ ಅಡಗಿವೆ. ಈ ಅಂಶವನ್ನೇ ವಿಷ್ಣು ಸಹಸ್ರನಾಮದಲ್ಲಿ ಪಾರ್ವತಿ ದೇವಿಯ ಪ್ರಶ್ನೆಗೆ ಪರಮೇಶ್ವರನು 'ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ । ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ॥' ಎಂಬ ಶೋಕವನ್ನು ಹೇಳುವ ಮೂಲಕ



ಉತ್ತರಿಸುತ್ತಾನೆ. ಗೋಸ್ವಾಮಿ ತುಳಸಿದಾಸರು ಹೇಳುತ್ತಾರೆ, 'ಪವನಸುತ ಹನುಮಂತ ಸಮುದ್ರವನ್ನು ದಾಟುವುದಕ್ಕೆ ಸನ್ನದ್ಧನಾಗಿ ದಡದಲ್ಲಿ ನಿಂತಿದ್ದಾನೆ! ಅವನ ಕೈಯಲ್ಲಿ ಶ್ರೀರಾಮ ಕೊಟ್ಟಿರುವ ಉಂಗುರವಿದೆ. ಸಮುದ್ರೋಲ್ಲಂಘನ ಮಾಡುವ ಮುನ್ನ ಆ ಉಂಗುರವನ್ನು ಎಲ್ಲಿಟ್ಟುಕೊಳ್ಳುವ ಜಿಜ್ಞಾಸೆ ಅವನದು. ಹನುಮಂತ ಯೋಚಿಸಿದ. ಕೈಮುಷ್ಠಿಯೊಳಗೆ ಇಟ್ಟುಕೊಂಡು ಹಾರುವಾಗ ಅದೇನಾದರೂ ಸಮುದ್ರದಲ್ಲಿ ಬಿದ್ದುಹೋದರೆ ಎನಿಸಿತವನಿಗೆ. ಅಯ್ಯೋ ಏನು ಮಾಡುವುದೆಂದು ಯೋಚಿಸುವಾಗ ಅವನಿಗೊಂದು ದಾರಿ ಹೊಳೆಯಿತು. ಆ ಕೂಡಲೇ ರಾಮಮುದ್ರಿಕಾ ಉಂಗುರವನ್ನು ಬಾಯೊಳಗೆ ಇಟ್ಟುಕೊಂಡು ಸಮುದ್ರೋಲ್ಲಂಘನ ಮಾಡಿದ ಹನುಮ.

ಈ ಅಂಶವನ್ನೇ ಗೋಸ್ವಾಮಿ ತುಲಸೀದಾಸರು ತಮ್ಮ ಹನುಮಾನ್ ಚಾಲೀಸದಲ್ಲಿ ಪ್ರಭುಮುದ್ರಿಕಾ ಮೇಲಿ ಮುಖ್ ಮಾಹಿ । ಜಲಧಿ ಲಾಂಘ್ ಗಯೆ ಅಚರಜ ನಾಹಿ ॥ ಎಂದರೆ ಪ್ರಭು ಶ್ರೀರಾಮನ ಮುದ್ರೆ (ಉಂಗುರ) ಯನ್ನು ಬಾಯಲ್ಲಿ ಇಟ್ಟುಕೊಂಡು ಸಮುದ್ರವನ್ನೇ ದಾಟಿದ್ದಾನೆ ಹನುಮಂತ ಎಂದು ವರ್ಣಿಸುತ್ತಾರೆ. ತುಲಸೀದಾಸರ ಉದ್ದಿಶ್ಯ ಹೀಗೂ ಇದ್ದಿರಬಹುದು.

ಭವಸಾಗರವನ್ನು ದಾಟಲು ರಾಮನಾಮಾಮೃತ ಒಂದಿದ್ದರು ಸಾಕು ಅಂತ. ಅಷ್ಟಿಲ್ಲದೇ ದಾಸರು ಹೇಳುತ್ತಾರೆಯೇ, 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ...' ಅಂತ.

*ಸಂಗ್ರಹ–ಸಾವಿತ್ರಿ*



# ಇಂಗ್ಲೀಷರ ಚೌಚೌ!

ಹೋಟೆಲ್‌ಗೆ ಹೋಗಿ ಚೌಚೌ ಕೊಡಿ ಎಂದರೆ ಕೇಸರಿಬಾತ್ ಮತ್ತು ಖಾರಾಬಾತ್ ಸೇರಿಸಿ ಕೊಡುತ್ತಾರೆ. ಅದೇ ಇಂಗ್ಲೀಷರ ಊರಲ್ಲಿ ಚೌಚೌ ಕೊಡಿ ಎಂದರೆ ಸೀಮೆಬದನೆಕಾಯಿ ಕೈಗಿಡುತ್ತಾರೆ. ಹೌದು, ಇಂಗ್ಲೀಷ್‌ನಲ್ಲಿ ಚೌಚೌ ಎಂದರೆ ಸೀಮೆ ಬದನೆಕಾಯಿ!

ಮೆಕ್ಸಿಕೋ ಮೂಲದ ಬಳ್ಳಿ ಜಾತಿಗೆ ಸೇರಿದ ಸೀಮೆ ಬದನೆಕಾಯಿಯನ್ನು ಕೊಯ್ಲು ಮಾಡದೆ ಗಿಡದಲ್ಲೇ ಬಿಟ್ಟರೆ ಅಲ್ಲಿಯೇ ಬಲಿತು, ತಲೆಯಲ್ಲಿ ಇರುವ ಸೀಳು ಭಾಗದಿಂದ ಮೊಳಕೆ ಬರುತ್ತದೆ. ಅದಕ್ಕೆಂದೇ ಇದನ್ನು ತಲೆ ಒಡಕಿನಕಾಯಿ ಎಂದೂ ಕರೆಯುತ್ತಾರೆ. ಮೊಳಕೆ ಬಂದ ಕಾಯಿಯನ್ನು ನೆಲದೊಳಗೆ ಹೂತರೆ ವಾರದೊಳಗೆ ಭೂಮಿಯಿಂದ ಮೇಲಕ್ಕೆ ಗಿಡ ಹುಟ್ಟಿ ಬರುತ್ತದೆ. ಗಿಡಕ್ಕೆ ಆಸರೆಯಾಗಿ ಮರ, ಮನೆಯ ಛಾವಣಿ ಇದ್ದರೆ ಅಥವಾ ಚಪ್ಪರಕ್ಕೆ ಹಬ್ಬಿಸಿದರೆ ಎರಡು ತಿಂಗಳುಗಳವ್ರೆರಗೂ ಹಬ್ಬುತ್ತದೆ. ನಂತರ ಕಾಯಿ ಬಿಡಲು ಪ್ರಾರಂಭ.

ನಾಲ್ಕು ತಿಂಗಳುಗಳ ಕಾಲ ಕಾಯಿ ಬಿಡುತ್ತದೆ. ಕಾಯಿ ಬಿಡಲು ವರ್ಷದ ಇಂತಹ ತಿಂಗಳೇ ಎಂದಿಲ್ಲ. ಬಿರುಬೇಸಿಗೆಯಲ್ಲೂ ಸ್ವಲ್ಪ ನೀರು ಹಾಕಿದರೆ ಕಾಯಿ ಬಿಡುತ್ತದೆ. ಕಾಯಿ ಬಿಡುವುದನು ನಿಲ್ಲಿಸಿದ ಮೇಲೆ ಬಳ್ಳಿ ಒಣಗುತ್ತದೆ. ಒಣಗಿದ ಮೇಲೆ ಬುಡ ಕತ್ತರಿಸಿ ಗಿಡದ ಸುತ್ತ ಬಗೆದು ದನದ ಗೊಬ್ಬರ ಮತ್ತು ನೀರು ಹಾಕಿದರೆ ಮತ್ತೆ ಚಿಗುರುತ್ತದೆ. ಸೀಮೆಬದನೆಕಾಯಿಯ ಗಿಡ ಒಂದು ಬಾರಿಗೆ 500 ಕಾಯಿಗಳನ್ನು ಬಿಡುತ್ತದೆ. 40 ಕೆ.ಜಿ. ತೂಕದ ಚೀಲಕ್ಕೆ 150ರಿಂದ 200 ರೂ. ಬೆಲೆ ಸಿಗುತ್ತದೆ. ಸೀಮೆಬದನೆಯ ಸಾಂಬಾರು, ಪಲ್ಯ, ಗೊಜ್ಜು ಮತ್ತು ತಂಬುಳಿ ಜನಪ್ರಿಯ.

ಸೀಮೆಬದನೆಕಾಯಿಯಲ್ಲಿ ಕಾರ್ಬೋಹೈಡ್ರೇಟ್, ಕ್ಯಾಲ್ಸಿಯಂ, ಕಬ್ಬಿಣಾಂಶ, ಮ್ಯಾಗ್ನೀಶಿಯಂ, ಫಾಸ್ಫರಸ್, ಪ್ರೋಟೀನ್, ಪೊಟ್ಯಾಶಿಯಂ, ವಿಟಮಿನ್ ಎ ಹೇರಳವಾಗಿದೆ. ಜತೆಗೆ ವಿಟಮಿನ್ ಬಿ1, ಬಿ2, ಬಿ3, ಬಿ5, ಬಿ6, ಬಿ9 ಇವೆ. ವಿಟಮಿನ್ ಸಿ, ಡಿ, ಇ ಮತ್ತು ಕೆ ಕೂಡಾ ಹೇರಳವಾಗಿದೆ.

*(ವೀಣಾ, ಹುಬ್ಬಳ್ಳಿ)*





# ಸಹಾಯ

ಮಧ್ಯಾಹ್ನದ ಸಮಯ. ಇಂಗ್ಲೆಂಡಿನ ಹಳ್ಳಿಯೊಂದರ ಹೊಲದಲ್ಲಿ ರೈತನೊಬ್ಬ ಕೆಲಸದಲ್ಲಿ ತೊಡಗಿದ್ದ. ಎಲ್ಲಿಂದೋ ಮಗುವೊಂದು ಚೀರಿದ ಶಬ್ದ ಕೇಳಿಸಿತು. ‘ಅಯ್ಯೋ, ಕಾಪಾಡಿ, ಕಾಪಾಡಿ’ ಎಂದು ಕೂಗಿಕೊಳ್ಳುತ್ತಿದ್ದ. ರೈತ ತನ್ನ ಕೆಲಸ ನಿಲ್ಲಿಸಿ ಅತ್ತ ಓಡಿದ. ಪಕ್ಕದಲ್ಲಿದ್ದ ಕೆರೆಯೊಂದರ ಕೆಸರಿನಲ್ಲಿ ಹುಡುಗನೊಬ್ಬ ನಿಧಾನವಾಗಿ ಮುಳುಗುತ್ತಿದ್ದ. ಹುಡುಗ ಗಾಬರಿಯಾದಂತಿತ್ತು. ರೈತ ತನ್ನ ಬಳಿಯಿದ್ದ ವಸ್ತ್ರವನ್ನು ಆತನ ಬಳಿ ಬಿಸಾಕಿ ಹೊರಗೆ ಎಳೆದು ಕೆಸರಿನಿಂದ ರಕ್ಷಿಸಿದ. ಮೈಕೈಗೆ ಮೆತ್ತಿದ ಕೆಸರನ್ನು ನೀರಿನಿಂದ ತೊಳೆದ. ಹುಡುಗ ಧನ್ಯವಾದ ಅರ್ಪಿಸಿದ. ರೈತನ ಹೆಸರು ತಿಳಿದುಕೊಂಡು ಹೊರಟು ಹೋದ.

ಮರುದಿನ ಬೆಳಿಗ್ಗೆ ತನ್ನ ತಂದೆಯೊಂದಿಗೆ ರೈತನ ಗುಡಿಸಲಿನ ಮುಂದೆ ಹುಡುಗ ಹಾಜರಾದ. ಶ್ರೀಮಂತ ತಂದೆ ಮಗನನ್ನು ಕಾಪಾಡಿದ್ದಕ್ಕಾಗಿ ಧನ್ಯವಾದ ಹೇಳಿದ. ‘ನೀವು ನನ್ನ ಮಗನನ್ನು ಕಾಪಾಡಿದ್ದೀರಿ. ನಿಮಗೆಷ್ಟು ಹಣ ಬೇಕು ಕೇಳಿ?’ ಎಂದ.

‘ನಾನು ಮಾನವೀಯತೆಯಿಂದ ನಿಮ್ಮ ಮಗನನ್ನು ರಕ್ಷಿಸಿದೆ. ಯಾರೇ ಆಗಿದ್ದರೂ ಅದನ್ನೇ ಮಾಡುತ್ತಿದ್ದರು. ಕಾರಣ ನನಗೆ ಹಣ ಬೇಡ’ ಎಂದ.

ಅಷ್ಟರೊಳಗೆ ರೈತನ ಮಗ ಗುಡಿಸಲಿನಿಂದ ಧ್ವನಿ ಕೇಳಿ ಹೊರ ಬಂದ. ಶ್ರೀಮಂತ ರೈತನ ಮಗನನ್ನು ನೋಡಿ ‘ಹಾಗಾದರೆ ನನಗೊಂದು ಅವಕಾಶ ಕೊಡಿ. ನಿಮ್ಮ ಮಗನ ಮುಖದಲ್ಲಿ ಬುದ್ಧಿವಂತಿಕೆಯ ಕಳೆ ಇದೆ. ಅವನನ್ನು ಚೆನ್ನಾಗಿ ಓದಿಸಿ ಅವನ ವಿದ್ಯಾಭ್ಯಾಸದ ಖರ್ಚನ್ನಾದರೂ ನಾನು ನೋಡಿಕೊಳ್ಳುತ್ತೇನೆ. ಇಷ್ಟಾದರೂ ನಿಮ್ಮ ಋಣ ತೀರಿಸಿದ ಸಮಾಧಾನ ನನಗೆ’ ಎಂದ.

ರೈತನನ್ನು ಒಪ್ಪಿಸಿ, ವಂದನೆ ಹೇಳಿ ಹೊರಟುಹೋದನು. ಮುಂದಿನ ವರ್ಷಗಳಲ್ಲಿ ರೈತನ ಮಗನ ವಿದ್ಯಾಭ್ಯಾಸಕ್ಕೆ ನೆರವು ನೀಡಿದರು. ರೈತನ ಮಗ ಲಂಡನ್ನಿನ ಸಂತ ಮೇರಿ ವೈದ್ಯಕೀಯ ಕಾಲೇಜಿನ ಪದವೀಧರನಾದ. ಹಲವಾರು ವೈದ್ಯಕೀಯ ಸಂಶೋಧನೆಗಳನ್ನು ಕೈಗೊಂಡ. ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಜೀವನಿರೋಧಕವಾದ ಪೆನ್ಸಿಲಿನ್ ಕಂಡುಹಿಡಿದ. ಇವನಾರೆಂದು ನಿಮಗೆ ಗೊತ್ತಾಯಿತೇ? ಇವರೇ ಅಲೆಕ್ಸಾಂಡರ್ ಫ್ಲೆಮಿಂಗ್ ಎಂಬ ಸುಪ್ರಸಿದ್ಧ ವಿಜ್ಞಾನಿ!

ಕೆಲವು ವರ್ಷಗಳಾದ ಮೇಲೆ ಶ್ರೀಮಂತನ ಮಗನಿಗೆ ನ್ಯೂಮೋನಿಯ ತಗುಲಿತು. ಆಗಲೂ ಅವನನ್ನು ಉಳಿಸಿದ್ದು ಇದೇ ರೈತನ ಮಗ ಸಂಶೋಧಿಸಿದ ಪೆನ್ಸಿಲಿನ್. ಆ ಹೊತ್ತಿಗೆ ರಾಜಕಾರಣದಲ್ಲಿ ಪ್ರಬುದ್ಧಾವಸ್ಥೆಯಲ್ಲಿದ್ದ ಶ್ರೀಮಂತನ ಮಗ ಮುಂದೆ ಇಂಗ್ಲೆಂಡಿನ ಪ್ರಧಾನ ಮಂತ್ರಿಯೂ ಆದ. ಇವರೇ ಸರ್ ವಿನ್‌ಸ್ಟನ್ ಚರ್ಚಿಲ್.

*(ಸಂಗ್ರಹ: ಪ್ರಕಾಶ ಎಸ್. ಮನ್ನಂಗಿ)*

# ಗೆಲ್ಲಬೇಕೆಂದರೆ ಶಿಸ್ತು ಜತೆಗಿರಬೇಕು

ಒಂದು ಗುರಿಯ ಹಿಂದೆ ಇರಬೇಕಾದ ಶಿಸ್ತು ಹಾಗೂ ಬಾಧ್ಯತೆಯ ಬೆಲೆ ಏನೆಂಬುದನ್ನು ಯಶಸ್ಸನ್ನು ಪಡೆದವರೆಲ್ಲರೂ ಚೆನ್ನಾಗಿ ಬಲ್ಲರು. ಈ ಶಿಸ್ತು ಮೂಲತಃ ಒಂದು ಸರಳ ಜೀವನದ ಸಂಕೇತ. ಏಕಾಗ್ರತೆಯನ್ನು ಬೆಳೆಸಿಕೊಳ್ಳಲು ಇದು ಅವಶ್ಯಕ.

ತೀವ್ರ ಅಭ್ಯಾಸದ ದಿನಗಳಲ್ಲಿ ಸತತವಾಗಿ, ಆರು ವರ್ಷಗಳ ಕಾಲ ಒಂದೇ ಒಂದು ಚಲನಚಿತ್ರವನ್ನು ತಾನು ನೋಡಿರಲಿಲ್ಲವೆಂದು, ಖ್ಯಾತ ಬ್ಯಾಡ್ಮಿಂಟನ್ ಪಟು ಪ್ರಕಾಶ್ ಪಡುಕೋಣೆ ಒಮ್ಮೆ ಹೇಳಿದ್ದರು. ದಿನವೂ ಬೆಳಿಗ್ಗೆ 5.30ಕ್ಕೆ ಎದ್ದು ಹತ್ತು ಕಿ.ಮೀ.ಗಳಷ್ಟು ಓಡುವುದು. ಮನೆಗೆ ಮರಳಿ ತಿಂಡಿ ತಿಂದು, ಸ್ವಲ್ಪ ವ್ಯಾಯಾಮದ ಅನಂತರ ಎರಡೂವರೆ ಗಂಟೆಗಳ ಕಾಲ ಆಟದಲ್ಲಿ ಅಭ್ಯಾಸ, ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ಊಟ ಮಾಡಿ, ನಾಲ್ಕರಿಂದ ಏಳರವರೆಗೆ ಆಟ ಆಡುವುದು, ಆ ಮೂಲಕ ದಣಿದ ದೇಹವನ್ನು ಇನ್ನೊಂದು ಅರ್ಧ ತಾಸು ನಿಧಾನವಾಗಿ ಶಾಂತಿಗೊಳಿಸುವ ಸರಳ ವ್ಯಾಯಾಮಗಳಲ್ಲಿ ತೊಡಗಿಸಿ ಮನೆಗೆ ಹಿಂತಿರುಗುವುದು. ಅನಂತರ ಭೋಜನ ಮಾಡಿ ನೆಮ್ಮದಿಯಾಗಿ ನಿದ್ರೆ ಮಾಡುವುದು. ಈ ರೀತಿಯ ಶಿಸ್ತಿನ ಸರಳ ಜೀವನವನ್ನು ಅವರು ವಾರದ ಏಳೂ ದಿನಗಳು ಆರು ವರ್ಷಗಳವರೆಗೆ ಪಾಲಿಸಿಕೊಂಡು ಬಂದಿದ್ದರು!

ಭಾರತದ ಪ್ರಖ್ಯಾತ ಕ್ರೀಡಾಪಟುಗಳಾದ ಸುನೀಲ್ ಗವಸ್ಕರ್, ಕಪಿಲ್‌ದೇವ್, ಸಚಿನ್ ತೆಂಡೂಲ್ಕರ್, ಚೆಸ್ ಮಾಂತ್ರಿಕ ವಿಶ್ವನಾಥನ್ ಆನಂದ್ ಹಾಗೂ ಪಿ.ಟಿ. ಉಷಾ ಮುಂತಾದವರ ಜೀವನ ಕ್ರಮವೂ ಇದೇ ಮಾದರಿಯದ್ದು. ಇವರೆಲ್ಲರೂ ತಮ್ಮ ಜೀವನದಲ್ಲಿ ತಾವು ಆಯ್ದುಕೊಂಡ ಕ್ಷೇತ್ರದಲ್ಲಿ ಉತ್ಕೃಷ್ಟತೆ ಸಂಪಾದಿಸಿಕೊಳ್ಳಲು ಮಿಕ್ಕೆಲ್ಲವನ್ನೂ ತ್ಯಜಿಸಿ ಒಂದೇ ಮನಸ್ಸಿನಿಂದ ತಮ್ಮನ್ನು ತಾವೇ ಅರ್ಪಿಸಿಕೊಂಡರು. ಪ್ರಪಂಚದ ಕಣ್ಣಿನಲ್ಲಿ ಇವರೆಲ್ಲರೂ ಹಲವು ಪ್ರಾಪಂಚಿಕ ವಿವರಗಳಿಂದ ಎಂದಿಗೂ ವಂಚಿತರಾದವರು. ಆದರೆ, ಆ ವಿಷಯವಾಗಿ ಇವರನ್ನೇ ಕೇಳಿದಾಗ, ''ನಾವೇನೂ ಏನನ್ನೂ ಕಳೆದುಕೊಂಡವರಲ್ಲ. ವಾಸ್ತವವಾಗಿ ನಾವು ಅತಿಶಯ ಆನಂದವನ್ನು ದಕ್ಕಿಸಿಕೊಂಡಿದ್ದೇವೆ'' ಎನ್ನುತ್ತಾರೆ. ವ್ಯಕ್ತಿತ್ವ ವಿಕಾಸದಲ್ಲಿ ಹಾಗೂ ಶ್ರೇಷ್ಠತೆಯೆಡೆಗೆ ಸಾಗುವ ಹಾದಿಯಲ್ಲಿ ದೊರೆಯುವುದು ಆನಂದ. ವಿಕಸನದ ಪ್ರಕ್ರಿಯೆ ಹಾಗೂ ಕಲಿಕೆಯ ಮೂಲವೇ ಆನಂದ. ಆನಂದ ಒಂದಿದ್ದರೆ ಎಲ್ಲವೂ ಇದ್ದಂತೆಯೇ. ಆನಂದ ಇದ್ದೆಡೆಯಲ್ಲಿ ಯಾವುದನ್ನೋ ಕಳೆದುಕೊಂಡೆವೆಂಬ ಪ್ರಶ್ನೆಯೇ ಏಳದು.

–ಸುಮಿತ್ರಾ ಕೆ.

*(Contd. in Page 13)*



# ಅಕ್ಕಮಹಾದೇವಿಯವರ ಬದುಕು ಬವಣೆ ಸಾಧನೆ

ಉಡುತಡಿಯಲ್ಲಿ ಸುಮತಿ ಮತ್ತು ನಿರ್ಮಲ ಎಂಬ ದಂಪತಿಗಳ ಮಗಳಾಗಿ ಅಕ್ಕಮಹಾದೇವಿ ಜನನಸಿದರು. ಆಗ ಅವರನ್ನು ಮಹಾದೇವಿ ಎಂದು ಕರೆಯಲಾಗುತ್ತಿದ್ದಿತು. ಸಂಪ್ರದಾಯಸ್ಥ ವೀರಶೈವರ ಮನೆಯಲ್ಲಿ ಹುಟ್ಟಿ ಬೆಳೆದ ಮಹಾದೇವಿಯು ಸಹಜವಾಗಿಯೆ ಶಿವಭಕ್ತಿಯ ಸಾಕಾರ ಮೂರ್ತಿಯಾಗಿದ್ದಳು. ಆಕೆಯ ಆಟಪಾಠ ಪೂಜೆ ಪ್ರಸಾದಗಳೆಲ್ಲವೂ ಶಿವಲೀಲೆಗಳೇ ಶಿವಮಯವೇ ಆಗಿದ್ದವು.

ಕಣ್ಣುಸೆಳೆವ ರೂಪಸಿಯಾಗಿ ಬೆಳೆದ ಮಹಾದೇವಿ ತನ್ನ ಗೆಳತಿಯರೊಡನೆ ಶಿವಾಲಯಕ್ಕೆ ಹೊರಟಿರಬೇಕಾದರೆ ರಾಜ ಕೌಶಿಕನು ಅವಳಿಗೆದುರಾಗಿ ಈ ಸೌಂದರ್ಯ ರಾಶಿಯನ್ನು ತನ್ನದಾಗಿಸಿಕೊಳ್ಳಬಯಸಿದನು. ರಾಜ ಪ್ರಭುತ್ವದಲ್ಲಿ ಅವರು ಯಾವಾಗ ಏನನ್ನು ಬೇಕಾದರೂ ದತ್ತಾಪಹಾರ ಮಾಡಿಯಾದರೂ ಪಡೆದುಕೊಳ್ಳುವಷ್ಟು ತೀವ್ರಲಾಲಸಿಗಳಾಗಿದ್ದರು. ಕೌಶಿಕನು ಮಹಾದೇವಿಯಕ್ಕನ ಮನೆಗೆ ವಿವಾಹದ ಪ್ರಸ್ತಾಪದೊಂದಿಗೆ ಬೆದರಿಕೆಯನ್ನೂ ಕಳುಹಿಸಿದ್ದನೆಂದು ಕಾಣುತ್ತದೆ. ಯೌವನದಲ್ಲೇ ವೈರಾಗ್ಯ ಪಥದತ್ತ ಆಕರ್ಷಿತಳಾಗಿದ್ದ ಮಹಾದೇವಿ ಕೌಶಿಕನೂ ಶಿವಭಕ್ತನೆಂದು ತಿಳಿದ ಬಳಿಕವಷ್ಟೇ ತನ್ನ ಶಿವಾರಾಧನೆಗೆ ಯಾವುದೇ ವಿಘ್ನ ಬರಕೂಡದು ಎಂದು ಷರತ್ತು ಹಾಕಿಯೇ ವಿವಾಹವಾಗಲು ಒಪ್ಪುವಳು.

ಅರಮನೆಯಲ್ಲಿ ಆಗುವುದೇ ಬೇರೆ! ಅವಳು ಅಂದುಕೊಂಡಿದ್ದೇ ಬೇರೆ! ಕೌಶಿಕನು ಶಿವಪೂಜೆಯನ್ನು ಮಾಡುತ್ತಿದ್ದನಾದರೂ ಕಟ್ಟಾಭವಿಗಳಂತೆಯೇ ವರ್ತಿಸುವನು. ಜಂಗಮರ ಆರೋಗಣೆಯ ಸಮಯದಲ್ಲಿ ಅವಮಾನ, ಭಕ್ತಿ ಪರವಶತೆಯ ಗಳಿಗೆಯಲ್ಲಿ ಸಮಾಗಮಕ್ಕೆ ಆಹ್ವಾನ, ಪುರುಷರಿಗೆ ಸಹಜವಾದ ಆಕ್ರಮಕ ಪ್ರವೃತ್ತಿಯ ಲಕ್ಷಣಗಳು ಮಹಾದೇವಿಯ ವ್ಯಕ್ತಿತ್ವಕ್ಕೆ ಹೊಂದಿಕೊಳ್ಳಲಾಗದೇ ಹೋದವು. ತನ್ನನ್ನು ವಿವಸ್ತ್ರಗೊಳಿಸಲು ಪ್ರಯತ್ನಿಸಿದ ಕೌಶಿಕನನ್ನು ತಿರಸ್ಕರಿಸಿದ ಮಹಾದೇವಿ ಸ್ವತಃ ವಸ್ತ್ರಗಳ ಹಂಗಿನೊಂದಿಗೆ ಪತಿಯೊಂದಿಗಿನ ವಿವಾಹ ಬಂಧನವನ್ನೂ ಕಳಚಿ ಬಿಸುಟ ಮಹಾದೇವಿಯು ಉಡುತಡಿಗೆ ಹಿಂತಿರುಗುವಳು. ಕೌಶಿಕನು ಬಂದು ಕ್ಷಮೆ ಬೇಡುವನಾದರೂ ಎಂದೋ ಮಹಾದೇವಿ ಐಹಿಕ ಸುಖಗಳಿಗೆ ಬೆನ್ನು ತಿರುಗಿಸಬಲ್ಲ ನಿರ್ಲಿಪ್ತತೆಯನ್ನು ಸಹಜ ಸ್ವಭಾವದಲ್ಲೇ ಹೊಂದಿದ್ದ ಮಹಾದೇವಿ ಪುನಃ ರಾಣಿಯಾಗಿ ಅರಮನೆಯಲ್ಲಿ ಸೆರೆಯಾಗುವ ಪ್ರಶ್ನೆಯೇ ಇರಲಿಲ್ಲ.

ತಂದೆ ತಾಯಿ ಗೆಳತಿಯರನ್ನು ಸಂತಯಿಸಿ ತನ್ನ ವೈರಾಗ್ಯದ ಹಾದಿಗೊಂದು ತೋರುಗಂಬವೇ ಆದ ಪತಿಯನ್ನು ಕ್ಷಮಿಸಿ, ಆತನಿಗೆ ಶಿವತತ್ವಗಳನ್ನು ಅರುಹಿದ ಮಹಾದೇವಿಯು 'ಅಕ್ಕ'ನಾಗಿ ಅರಣ್ಯದೆಡೆಗೆ ನಡೆಯುತ್ತಾಳೆ.

ಮಹಾದೇವಿಯಕ್ಕನು ತನ್ನ ನಗ್ನತೆಯನ್ನು ತನ್ನದೇ ಸಮೃದ್ಧ ಕೇಶರಾಶಿಯ ಆಚ್ಛಾದನದಿಂದ ಮುಚ್ಚಿಕೊಂಡಿದ್ದಾದರೂ ಏಕೆ? ಈ ಪ್ರಶ್ನೆ ಮುಂದೆ ಆಕೆಗೆ 'ಅನುಭವ ಮಂಟಪ'ದಲ್ಲಿ ಅಲ್ಲಮಪ್ರಭುವಿನಿಂದ ಕೇಳಲ್ಪಡುತ್ತದೆ. ಆಗ ಅಕ್ಕಮಹಾದೇವಿ ಸೂಕ್ಷ್ಮವಾಗಿ ತಾನು ಭವ ಬಂಧನಗಳನ್ನು ತೊರೆದುಕೊಂಡಿದ್ದರೂ, ತನ್ನ ನಗ್ನತೆಯನ್ನು ಕಂಡು ವಿಚಲಿತರಾಗದಂಥಾ

ಸಂಯಮವನ್ನು ಎಲ್ಲರಿಂದಲೂ ನಿರೀಕ್ಷಿಸಲಾಗದೇ ಹೀಗೆ ಕೇಶರಾಶಿಯಿಂದ ಮೈಮುಚ್ಚಿಕೊಂಡೆ ಎಂಬರ್ಥದ ಉತ್ತರವನ್ನು ನೀಡುತ್ತಾಳೆ. ಆಕೆ ಪಾಳುಮಂಟಪ ಒಂದರಲ್ಲಿ ತಂಗಿರಬೇಕಾದರೆ ಆಕೆಯ ಮೇಲೆ ಬಲಾತ್ಕಾರದ ಪ್ರಯತ್ನ ನಡೆಯಿತೆಂದೂ ಪ್ರಾಜ್ಞರ ಸಲಹೆಯಂತೆ ಆಕೆ ದೇಹವನ್ನು ಕೇಶಗಳಿಂದ ಮುಚ್ಚಿಕೊಂಡಳೆಂದೂ ಹೇಳಲಾಗುತ್ತದೆ. ಅಕ್ಕಮಹಾದೇವಿಯಲ್ಲಿ ಎಷ್ಟೆಲ್ಲಾ ಪ್ರಶ್ನೆಗಳಿದ್ದವು? ಗೊಂದಲಗಳಿದ್ದವು? ಜಿಜ್ಞಾಸೆಗಳಿದ್ದವು? ವ್ಯಥೆ ಏಕಾಕಿತನ ಭೀತಿ ಒಲಕೋಟಿಗಳು ಕಾಡುತ್ತಿದ್ದವು ಎಂಬುದು ಆಕೆಯ ವಚನಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅವೆಲ್ಲಕ್ಕೂ ಪರಿಹಾರ ತಿಳಿಸುವ ಸದ್ಗುರುವನ್ನು ಅರಸುತ್ತಲೇ ಅಕ್ಕಮಹಾದೇವಿ ಬೆಟ್ಟಗುಡ್ಡ ಕಾಡುಮೇಡುಗಳಲ್ಲಿ ಇರುಳು ಹಗಲು ಚಳಿಮಳೆ ಗಾಳಿಗಳ ಭೇದವಿಲ್ಲದೆ ಅಲೆದಳು.

ಆಕೆ ಭಿಕ್ಷಾಟನೆಯಿಂದ ಅತ್ಯಲ್ಪ ಆಹಾರವನ್ನು ಸೇವಿಸಿ ತನ್ನ ಹಸಿವನ್ನು ಇಂಗಿಸಿಕೊಳ್ಳುತ್ತಿದ್ದಳು. ಕೆರೆಬಾವಿಗಳ ನೀರನ್ನು ಕುಡಿದು ತೃಷೆ ಅಡಗಿಸಿಕೊಳ್ಳುವಳು. ಅವಳಿಗೆ ತನ್ನ ದೇಹ ಸೌಂದರ್ಯ, ಆರೋಗ್ಯಗಳ ಪರಿವೆಯೇ ಹೊರಟುಹೋಯಿತು. ಸಮಗ್ರ ಪ್ರಕೃತಿಯಲ್ಲೂ ದೇವರನ್ನು ಅರಸುತ್ತಿದ್ದಳು. ಪಶುಪಕ್ಷಿಗಳನ್ನು ಮರಗಿಡ ನದಿತೊರೆಗಳನ್ನು ಬೆಟ್ಟಗುಡ್ಡ ಕಾಡುಕಣಿವೆಗಳನ್ನು ಆಕೆ 'ಚೆನ್ನಮಲ್ಲಿಕಾರ್ಜುನನನ್ನು ನೀವು ಕಾಣಿರೇ? ಕಂಡಲ್ಲ ತೋರಿರೇ' ಎಂದು ಕೇಳುತ್ತಾಳೆ.

ದೇವರು ಪ್ರಕೃತಿಯಲ್ಲಿ ಅಂತರ್ಗತನಾಗಿದ್ದಾನೆಂಬ ಅರಿವು ಅಕ್ಕಮಹಾದೇವಿಗಿದ್ದಿರಲೇಬೇಕು. ಇಷ್ಟಾಗಿಯೂ ಆಕೆ ಚನ್ನಮಲ್ಲಿಕಾರ್ಜುನನ ರೂಪವನ್ನು ಪರಿಪರಿಯಾಗಿ ಕಲ್ಪಿಸಿಕೊಂಡಿದ್ದಾಳೆ. ತಮ್ಮ ಪರಮಾಪ್ತರನ್ನು ಕಳೆದುಕೊಂಡವರು, ಅವರ ಚಹರೆಗಳನ್ನು ತಿಳಿಸಿ ಹುಡುಕಿಕೊಡುವಂತೆ ವಿನಂತಿಸಿಕೊಳ್ಳುವರಲ್ಲವೆ? ಅಕ್ಕಮಹಾದೇವಿ ಕೂಡ ತನ್ನ ಚನ್ನಮಲ್ಲಿಕಾರ್ಜುನ ಕೆಂಜಡೆಗಳುಳ್ಳ ಸುಂದರ ದಂತಪಂಕ್ತಿಗಳ, ಫಣಿಮಣಿ ಕುಂಡಲವನ್ನು ರುಂಡಮಾಲೆಯನ್ನು ಧರಿಸಿರುವ ಸುಂದರ ಆದರೆ ಅಲಂಕಾರಾಭೂಷಿತಗಳಿಲ್ಲದ ಪುರುಷ ರೂಪಿಸಿವನೆಂದು ಕಲ್ಪಿಸಿಕೊಂಡಿದ್ದಾಳೆ.

ಕೊನೆಗೆ ಅಕ್ಕ ತನ್ನ ಗಮ್ಯವಾದ ಕಲ್ಯಾಣವನ್ನು ತಲುಪುವಳು. ಮೊದಲು ಬಸವಣ್ಣನವರ ಮನೆಗೆ ತೆರಳಿ ಅವರ ಪತ್ನಿ ನೀಲಾಂಬಿಕೆಯನ್ನು ಕಾಣುವಳು. ಆಕೆ ಬೆತ್ತಲೆಯಾಗಿಯೇ ಶಿವಶರಣರ ತತ್ವಗೋಷ್ಠಿಯಾದ ಅನುಭವ ಮಂಟಪಕ್ಕೆ ತೆರಳಿ ಶೂನ್ಯ ಎಲ್ಲರಿಗೂ ಶರಣು, ಶರಣೆನ್ನುವಳು. ಆಕೆ ಬೆತ್ತಲೆಯಾಗಿರುವುದರ ಕುರಿತು ಆಕ್ಷೇಪಿಸಿ, ಆಕ್ರೋಶವನ್ನು ವ್ಯಕ್ತಪಡಿಸಿ ಅಲ್ಲಮನು ಉದ್ದೇಶಪೂರ್ವಕವಾಗಿಯೇ ಅಕ್ಕಮಹಾದೇವಿಯ ಸತ್ವ ಮತ್ತ ಭಕ್ತಿ ಪ್ರಕಾಶಿಸುವಂತೆ ಮಾಡುವನು.

ಬಸವಣ್ಣನವರ ಭಕ್ತಿ, ಚನ್ನಬಸವಣ್ಣನವರ ಜ್ಞಾನ ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಳ ಅಜಗಣ್ಣನ ಐಕ್ಯಸ್ಥಳ, ನಿಜಗುಣನ ಆರೂಢಸ್ಥಲ, ಸಿದ್ಧರಾಮನ ಸಮಾಧಿಸ್ಥಲ–ಹೀಗೆ ಎಲ್ಲರಿಂದಲೂ ಅಕ್ಕಮಹಾದೇವಿ ಕರುಣಕಟಾಕ್ಷವನ್ನು ಪಡೆದಳು.

ಅಲ್ಲಮಪ್ರಭು ಆಕೆಯೊಡನೆ ಆಧ್ಯಾತ್ಮ ಸಂವಾದ ನಡೆಸಿ ಕೊನೆಗೆ ಅಕ್ಕಮಹಾದೇವಿಗೇ ಶರಣು ಶರಣೆನ್ನುತ್ತಾನೆ. ತಾಮಸ ಗುಣದ ಮಾಯೆಯು ಕಾಣದ ಗೆಲುವನ್ನು ಸಾತ್ವಿಕ ತೇಜಸ್ಸು ಕಂಡಿತು. ಅಲ್ಲಮಪ್ರಭು ಬಸವಣ್ಣರ ಬಳಿ ಅಕ್ಕಮಹಾದೇವಿ ಗುಣಗಾನ ಮಾಡಿರುವುದು ಹೊಗಳಿಕೆಯಾಗಿರದೆ ಸ್ತ್ರೀಯು ತನ್ನ ಸಾತ್ವಿಕತೆ, ಭಕ್ತಿ, ವೈರಾಗ್ಯಗಳಿಂದ ತನ್ನನ್ನು ತಾನು ಮಾತ್ರವಲ್ಲ ಇಡೀ ಜಗತ್ತನ್ನೇ ಗೆಲ್ಲಬಲ್ಲಳು. ತನ್ನ ಅರಿವು ಜ್ಞಾನಗಳ ಭಂಡಾರವನ್ನು ಭವಿಗಳಿಗೆ ಸೂರೆಗೈದು ಕೊಡಬಲ್ಲಳು ಎಂಬ ಭಾವಾರ್ಥವು ಗೋಚರಿಸುತ್ತದೆ.





# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

**ಪ್ರೊ. ಬಿ. ನಾರಾಯಣಮ್ಮ**





ಶ್ರೀ ಮರಿಮಲ್ಲಯ್ಯ

**ದಾಸರಹಳ್ಳಿಯ 1532ರ ಶಾಸನ**

ದಾಸರಹಳ್ಳಿಯ 1532ರ ಒಂದು ಶಾಸನದಲ್ಲಿ ಅಚ್ಯುತ ಮಹಾರಾಯರು ಕೆಂಪದೇವರಸ (ಗೌಡ)ರಿಗೆ ನಾಯಕ ತನಕೆ ಪಾಲಿಸಿದ ಯಲಹಂಕ ರಾಜ್ಯಕ್ಕೆ ಸಲ್ಲುವ ಶಿವನ ಸಮುದ್ರದ ಸೀಮೆ ಒಳಗಣ ಎಂಬ ಉಲ್ಲೇಖವಿದೆ. ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಅರಸರ ಸಾಮಂತರಾಗಿದ್ದರು ಎಂದು ತಿಳಿದುಬರುತ್ತದೆ.

ಒಂದು ಶಾಸನದಿಂದ ರಣಭೈರೇಗೌಡರ ಮಗ ಜಯೇಗೌಡರಿಂದ ಕೆಂಪವೀರಪ್ಪನವರೆಗೂ ಏಳುಜನ ಗೌಡಪ್ರಭುಗಳ ಹೆಸರುಗಳು ತಿಳಿದುಬರುತ್ತವೆ.

ಗ್ರಾಮದಲ್ಲಿ ವಾಸಿಸುತ್ತಿದ್ದ ಅಚ್ಚ ಕನ್ನಡಿಗರು ಇವರು ಗ್ರಾಮದ ಮುಖಂಡರಾಗಿದ್ದು ಜನರಿಗೆ ಬೇಕಾದವರಾಗಿದ್ದರು. ಇವರ ಧರ್ಮಪತ್ನಿ ಲಕ್ಷ್ಮಮ್ಮನವರು ಈ ದಂಪತಿಗಳಿಗೆ ಅಪೂರ್ವ ಸುಂದರಿಯಾದ ಮಹಾಭಕ್ತಳಾದ ದೊಡ್ಡಂಬೆಯೆಂಬ ಮಗಳಿದ್ದಳು. ಆದಿಶಕ್ತಿ ಸ್ವರೂಪಿಣಿಯಾದ ಕೆಂಪಾಂಬೆಯ ಅವತಾರವೇ ದೊಡ್ಡಾಂಬೆ ಎಂದು ಪರಿಗಣಿಸಲಾಗಿತ್ತು. ರಣಭೈರೇಗೌಡರಿಗೆ ಭದ್ರೇಗೌಡ, ವೀರಣಗೌಡ, ತಮ್ಮೇಗೌಡ ಮತ್ತು ತಿಮ್ಮೇಗೌಡ ಎಂಬ ಅಪ್ರತಿಮ ಶೂರರಾದ ತಮ್ಮಂದಿರಿದ್ದರು.

ಹದಿಮೂರನೆಯ ಶತಮಾನದಲ್ಲಿ ದೆಹಲಿಯ ಮೊಗಲ್ ಸೈನ್ಯವು ದಕ್ಷಿಣದ ಯಾದವರ ದೇವಗಿರಿ, ಕಾಕತೀಯರ ಓರಂಗಲ್ಲು, ಮಧುರಗಳ ಮೇಲೆ ಯುದ್ಧಕ್ಕೆ ಬಂದಿತು. ಈ ಅರಸರಲ್ಲಿ ಒಗ್ಗಟ್ಟಿರಲಿಲ್ಲ. ಮಹಾವೈಭವದಿಂದ ರಾಜ್ಯಭಾರ ಮಾಡುತ್ತಿದ್ದ ಈ ಅರಸರು ದೆಹಲಿಯ ದಾಳಿಯನ್ನು ಎದುರಿಸಲಾರದೆ ಸೋತುಹೋದವು. ಕನ್ನಡನಾಡಿನ ಹೊಯ್ಸಳೇಶ್ವರ ವೀರಬಲ್ಲಾಳರು ತಮ್ಮ ರಾಜ್ಯವನ್ನು ಉಳಿಸಿಕೊಂಡು, ಇಂತಹ ಸಂದರ್ಭವನ್ನು ಉಪಯೋಗಿಸಿಕೊಂಡು ಕೆಲವು ಪಾಳೆಯಗಾರರು ಜನರನ್ನು ಕಾಡತೊಡಗಿದರು. ರಣಭೈರೇಗೌಡರಿದ್ದ ಪ್ರದೇಶದಲ್ಲಿ ಶೆಲ್ವನಾಯಕ ಎಂಬ ದುಷ್ಟ

ಪಾಳೆಯಗಾರನಿದ್ದನು. ಒಂದು ಸಲ ದೇವಾಲಯದ ಬಳಿ ದೊಡ್ಡಾಂಬೆಯನ್ನು ನೋಡಿ, ಆಕೆಯ ರೂಪ ಲಾವಣ್ಯಕ್ಕೆ ಮನ ಸೋತು, ಆಕೆಯನ್ನು ವಿವಾಹವಾಗಬೇಕೆಂದು ಬಯಸಿದನು. ಈ ಕಾರ್ಯಕ್ಕಾಗಿ ತನ್ನ ಮಂತ್ರಿ ಕರ್ಪಯ್ಯ ಮತ್ತು ದಂಡನಾಯಕರಾದ ಪೆರಿಮಲ್ಲ ಮತ್ತು ತಿರುಮಲ್ಲರನ್ನು ದೂತರನ್ನಾಗಿ ರಣಭೈರೇಗೌಡರ ಬಳಿ ಕಳುಹಿಸಿ, ದೊಡ್ಡಾಂಬೆಯ ವಿವಾಹದ ಪ್ರಸ್ತಾಪವನ್ನು ಮುಂದಿಟ್ಟನು.

ರಣಭೈರೇಗೌಡರು ಶೆಲ್ವನಾಯಕನಿಗೆ ಮಗಳನ್ನು ವಿವಾಹ ಮಾಡಿಕೊಡಲು ಒಪ್ಪಲಿಲ್ಲ. ಪೆರಿಮಲ್ಲ ಮತ್ತು ತಿರುಮಲ್ಲರು ಬಲಾತ್ಕಾರದಿಂದ ಈ ಮದುವೆ ನಡೆಸುವುದಾಗಿ ತಿಳಿಸಿದರು. ಇದರಿಂದ ಸಿಟ್ಟಿಗೆದ್ದ ರಣಭೈರೇಗೌಡರ ಸಹೋದರರು, ಪೆರಿಮಲ್ಲ, ತಿರುಮಲ್ಲರನ್ನು ಹಾಗೂ ಅವರೊಂದಿಗೆ ಬಂದಿದ್ದ ಸೈನಿಕರನ್ನು ಹೊಡೆದೋಡಿಸಿದರು. ಇದನ್ನು ತಿಳಿದ ಶೆಲ್ವನಾಯಕನು, ತನ್ನ ಸೈನ್ಯವನ್ನು ಒಗ್ಗೂಡಿಸಿ, ಅಂದು ರಾತ್ರಿಯೇ ರಣಭೈರೇಗೌಡರ ಮೇಲೆ ದಾಳಿ ಮಾಡಿ, ದೊಡ್ಡಾಂಬೆಯನ್ನು ಹಿಡಿದು ತಂದು ಮದುವೆಯಾಗಬೇಕೆಂದು ಯೋಜನೆಯನ್ನು ರೂಪಿಸಿದನು. ಈ ರಹಸ್ಯವನ್ನು ಗುಪ್ತಚಾರರಿಂದ ಅರಿತ ರಣಭೈರೇಗೌಡರು ಊರಿನ ಹಿರಿಯರೊಡನೆ ಸಮಾಲೋಚನೆ ನಡೆಸಿದರು. ಆಯುಧಗಳ ನೆರವಿಲ್ಲದೆ ಶೆಲ್ವನಾಯಕನನ್ನು ಎದುರಿಸುವುದು ಕಷ್ಟವೆಂದೂ, ಮುಗ್ಧ ರೈತರ ಬಲಿಯಾಗುವುದೆಂದು ಅರಿತ ರಣಭೈರೇಗೌಡರು ಆ ಗ್ರಾಮವನ್ನು ತೊರೆದು ಹೋಗಲು ನಿಶ್ಚಯಿಸಿದರು. ತಮ್ಮ ಆಸ್ತಿಯನ್ನೆಲ್ಲಾ ಬಡಬಗ್ಗರಿಗೆ ಹಂಚಿದರು. ಕತ್ತಲಾಗುತ್ತಿದ್ದಂತೆಯೇ ಏಳು ಕಂಚಿನ ಗಾಡಿಗಳಲ್ಲಿ ಗ್ರಾಮ ಬಿಟ್ಟು ಹೊರಟರು. ಆ ಗಾಡಿಗಳು ಸಾಲಾರ್ ನದಿಯ ತೀರದಲ್ಲಿ ಬಂದು ನಿಂತವು. ಮಳೆಯಿಂದಾಗಿ ನದಿಯಲ್ಲಿ ನೀರಿನ ಪ್ರವಾಹ ಹೆಚ್ಚಾಗಿತ್ತು.

ಶೆಲ್ವನಾಯಕನ ಸೈನಿಕರು ಗ್ರಾಮದ ಮೇಲೆ ದಾಳಿ ಮಾಡಿ, ಅನೇಕರಿಗೆ ಚಿತ್ರಹಿಂಸೆ ನೀಡಿ, ರಣಭೈರೇಗೌಡರು ಹೋದ ದಿಕ್ಕನ್ನು ತಿಳಿದುಕೊಂಡರು. ಪಾಲಾರ್ ನದಿಯ ದಡದಲ್ಲಿದ್ದ ರಣಭೈರೇಗೌಡರ ಕುಟುಂಬದವರಿಗೆ, ಶೆಲ್ವನಾಯಕನ ಸೈನಿಕರ ಕುದುರೆಗಳ ಖುರಪುಟದ ಧ್ವನಿ ಕೇಳಿಸಿತು. ಇನ್ನು ಶೆಲ್ವನಾಯಕ ಬಂದು ತಮ್ಮ ಮೇಲೆ ದಾಳಿ ಮಾಡಬಹುದೆಂದು ಎಲ್ಲರೂ ತಳಮಳಗೊಂಡರು. ತನ್ನಿಂದ ತನ್ನ ಕುಟುಂಬದವರಿಗೆ ತೊಂದರೆಯಾಗುವುದನ್ನು ಅರಿತು ದುಃಖದಿಂದ ದೊಡ್ಡಾಂಬೆ ಪಾಲಾರ್ ನದಿಯ ಪ್ರವಾಹದಲ್ಲಿಳಿದು, ತನ್ನ ಕಿವಿಯ ಓಲೆಗಳನ್ನು ತೆಗೆದು, ಅವುಗಳನ್ನು ಗಂಗಾಮಾತೆಗೆ ಸಮರ್ಪಿಸಿ, ತಮ್ಮ ಕಷ್ಟಗಳನ್ನು ಪರಿಹರಿಸಬೇಕೆಂದು ಪ್ರಾರ್ಥಿಸಿದಳು.

ಆಗ ಪವಾಡಸದೃಶ ಘಟನೆಯೊಂದು ನಡೆಯಿತು. ಪಾಲಾರ್ ನದಿ ಇಬ್ಭಾಗವಾಗಿ ದಾರಿ ಬಿಟ್ಟಿತು. ಕಂಚಿನ ಗಾಡಿಗಳು ಸರಾಗವಾಗಿ ನದಿಯನ್ನು ದಾಟಿ ಇನ್ನೊಂದು ದಡ ಸೇರಿದವು. ಅಷ್ಟರಲ್ಲಿ ಶೆಲ್ವನಾಯಕ, ಸೈನ್ಯ ಸಮೇತನಾಗಿ ಅಲ್ಲಿಗೆ ಬಂದನು. ಪಾಲಾರ್ ನದಿ ಮೊದಲಿನಂತೆ ಉಗ್ರವಾಗಿ ಹರಿಯತೊಡಗಿತು. ಶೆಲ್ವನಾಯಕನಿಗೆ ನದಿಯನ್ನು ದಾಡಲಾಗಲಿಲ್ಲ. ಇದನ್ನು ನೋಡಿದ ಶೆಲ್ವನಾಯಕನು ದೇವತಾಸ್ವರೂಪಳಾದ ದೊಡ್ಡಾಂಬೆಯನ್ನು ತಾನು ಬಯಸಿದುದು ತಪ್ಪಾಯಿತು. ರಣಭೈರೇಗೌಡರಿಗೆ ಅನ್ಯಾಯವಾಗಿ ಕಷ್ಟಗಳನ್ನು ಕೊಟ್ಟೆ ಎಂದು ಪಶ್ಚಾತ್ತಾಪದಿಂದ ಹಿಂದಕ್ಕೆ ಹೊರಟು ಹೋದನು. ಈ ಘಟನೆಯನ್ನು ಅನೇಕ ಇತಿಹಾಸಕಾರರು ಒಪ್ಪುವುದಿಲ್ಲ. (ಮುಂದುವರಿಯುವುದು)



# ತಲಕಾಡಿನ ಗಂಗರು (ಕ್ರಿ.ಶ. 350–999)

## ಎರಡನೆಯ ಶಿವಮಾರ (ಕ್ರಿ.ಶ. 788–812)

ಎರಡನೆಯ ಶಿವಮಾರ ಶ್ರೀಪುರುಷನ ಜ್ಯೇಷ್ಠ ಪುತ್ರ. ಅಧಿಕಾರಾರೂಢನಾದ ಮೇಲೆ ರಾಜ್ಯದಲ್ಲಿ ಶಾಂತಿಸ್ಥಾಪನೆಯ ಕಾರ್ಯದಲ್ಲಿ ತೊಡಗಿದನು. ಅವನು ಅಧಿಕಾರ ವಹಿಸಿಕೊಂಡ ಸ್ವಲ್ಪ ಕಾಲದಲ್ಲೇ ರಾಷ್ಟ್ರಕೂಟರ ಉಪಟಳ ಪ್ರಾರಂಭವಾಯಿತು. ಶಿವಮಾರ ಚಾಲುಕ್ಯರ ನೆರವು ಪಡೆದು ರಾಷ್ಟ್ರಕೂಟರ ಮೇಲೆ ದಂಡೆತ್ತಿ ಹೋದ. ಮುದಗುಂದೂರು ಬಳಿ (ಮಂಡ್ಯ ಜಿಲ್ಲೆ) ಸಂಭವಿಸಿದ ಭೀಕರ ಹೋರಾಟದಲ್ಲಿ ಜಯ ಕಾಣದ ಶಿವಮಾರ ಮತ್ತೊಮ್ಮೆ ರಾಷ್ಟ್ರಕೂಟರಿಗೆ ಸೆರೆ ಸಿಕ್ಕಿದನು. ಅನಂತರ ಯುವರಾಜನಾಗಿದ್ದ ಮಾರಸಿಂಹ ಗಂಗನಿಗೆ ಕ್ರಿ.ಶ. 796ರಲ್ಲಿ ಪಟ್ಟ ಕಟ್ಟಲಾಯಿತು. ಸೌಮ್ಯಸ್ವಭಾವದ ಶಿವಮಾರ ರಣರಂಗದಲ್ಲಿ ಜಯ ಕಾಣಲಿಲ್ಲವಾದರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಾರ್ಹನಾಗಿದ್ದಾನೆ. ಸರ್ವಧರ್ಮಗಳಲ್ಲೂ ನಂಬಿಕೆ ಇಟ್ಟಿದ್ದ ಇವನು ಶ್ರವಣಬೆಳಗೊಳದ ಜೈನಬಸದಿಯ ಸ್ಥಾಪನೆಗೂ ಕಾರಣಕರ್ತ. ಇವನ ಅದ್ವಿತೀಯವಾದ ವಿದ್ವತ್ತಿಗೆ ಅವನ ಗಜಾಷ್ಟಕ ಕೃತಿಯನ್ನು ಉದಾಹರಿಸಬಹುದು. ಸೇತುಬಂಧ ಕೃತಿಯನ್ನು ರಚಿಸಿದವನು ಇವನೇ ಎಂಬ ಪ್ರತೀತಿ ಇದೆ. ಆ ಕಾಲದ ಹಲವು ಕಠಿಣ ಗ್ರಂಥಗಳಾದ 'ಫಣಿಸುತ್ತಮತ' ಪತಂಜಲಿಯ 'ಯೋಗಶಾಸ್ತ್ರ'ಗಳನ್ನು ನಿರರ್ಗಳವಾಗಿ ಓದಿ ಅರ್ಥೈಸುತ್ತಿದ್ದ ರೀತಿ ಅವನ ವಿದ್ವತ್ತಿಗೆ ಪ್ರತೀಕವಾಗಿದೆ ಎನ್ನಲಾಗಿದೆ.

ಶಿವಮಾರನ ಅನಂತರ ಅಧಿಕಾರಕ್ಕೆ ಬಂದ ಮಾರಸಿಂಹ, ಅವನ ನಂತರ ಬಂದ ವಿಜಯಾದಿತ್ಯ ಪ್ರಬಲರಾಗಿದ್ದಂತೆ ಕಂಡುಬರುವುದಿಲ್ಲ. ಕ್ರಿ.ಶ. 816ರಲ್ಲಿ ಪಟ್ಟಕ್ಕೆ ಬಂದ ಒಂದನೇ ರಾಚಮಲ್ಲ ರಾಷ್ಟ್ರಕೂಟ ರಾಜ್ಯದಲ್ಲಿ ಕಾಣಿಸಿಕೊಂಡ ಗೊಂದಲದ ಪರಿಸ್ಥಿತಿಯ ಲಾಭ ಪಡೆದು ರಾಷ್ಟ್ರಕೂಟರ ಹಿಡಿತದಿಂದ ತನ್ನ ರಾಜ್ಯವನ್ನು ಬಿಡುಗಡೆ ಮಾಡಿದನು. ಒಂದನೇ ರಾಚಮಲ್ಲನ ಅನಂತರ ಆತನ ಮಗ ನೀತಿಮಾರ್ಗ ಎರೆಗಂಗ (ಕ್ರಿ.ಶ. 843–870) ಅಧಿಕಾರ ವಹಿಸಿಕೊಂಡನು. ರಾಜರಾಮುಡು ಎಂಬಲ್ಲಿ ನಡೆದ ಕದನದಲ್ಲಿ ಸೋತ ಅಮೋಘವರ್ಷ ತನ್ನ ಮಗಳಾದ ಚಂದ್ರಲಬ್ಬೆಯನ್ನು ಎರೆಗಂಗನ ಮಗ ಬೂತುಗನಿಗೆ ವಿವಾಹ ಮಾಡಿಕೊಟ್ಟು ಸಂಬಂಧ ಬೆಳೆಸಿಕೊಂಡನು. ಎರೆಗಂಗ ಸಮರ್ಥ ಆಡಳಿತಗಾರ. ಸಾಹಿತ್ಯ ಮತ್ತು ಕಲೆಗೆ ಉದಾರ ಪ್ರೋತ್ಸಾಹ ನೀಡಿದ್ದ. ಎರಡನೇ ರಾಚಮಲ್ಲ (ಕ್ರಿ.ಶ. 870–919) ಎರೆಗಂಗನ ಜ್ಯೇಷ್ಠ ಪುತ್ರ. ಇವನ ಆಳ್ವಿಕೆಯಲ್ಲಿ ಬೂತುಗ ಯುವರಾಜನಾಗಿ ಮುಂದುವರಿದ. ರಾಚಮಲ್ಲನಿಗೆ ಪುತ್ರ ಸಂತಾನವಿಲ್ಲದ ಪ್ರಯುಕ್ತ ಬೂತುಗನ ಮಗ ಎರೆಯಪ್ಪ ಕ್ರಿ.ಶ. 919ರಲ್ಲಿ ಅರಸನಾದ. ಅನಂತರ ಎರೆಯಪ್ಪನ ಮಕ್ಕಳಾದ ನರಸಿಂಹ, ಮೂರನೇ ರಾಚಮಲ್ಲ, ಅನುಕ್ರಮವಾಗಿ ಅಧಿಕಾರ ನಡೆಸಿದರು. ಇವರ ಆಳ್ವಿಕೆಯ ಬಗ್ಗೆ ಹೆಚ್ಚಿನ ವಿವರ ತಿಳಿದುಬಂದಿಲ್ಲ.

*(ಮುಂದುವರೆಯುವುದು)*

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

***ರಜನಿ, ಹೊಸಪೇಟೆ***

ಲೇಖನಿಗೂ, ನಾಲಿಗೆಗೂ ಏನು ವ್ಯತ್ಯಾಸ?

ಜಾಣನಿಗೆ ಲೇಖನಿ ಪೆಟ್ಟು, ದಡ್ಡನಿಗೆ ನಾಲಿಗೆ ಪೆಟ್ಟು

***ಪ್ರಕಾಶ್, ತಿಪಟೂರು***

ಅತ್ತೆ ಚೂಡಿದಾರ,ಸೊಸೆ ಸೀರೆ, ಏನಂತೀರಿ?

ಹೊಸ ಫಿಗರ್‍ರು ಹಳೆ ಡ್ರೆಸ್ಸು ಕೂಡಿರಲು ಬಲು ಸೊಗಸು. ನೀವೇನಂತೀರಿ?

***ಸೌಂದರ್ಯ, ಬೆಂಗಳೂರು***

ಪತಿಯನ್ನು 'ಗಂಡ' ಎಂದು ಕರೆಯುವುದು ಏಕೆ?

'ಗಂಡು' ಕೊಂಬು ಕಳೆದುಕೊಂಡರೆ ಆಗುವುದೇ ಗಂಡ?

***ಯಶೋಧಾ ರಾವ್, ಶಿವಮೊಗ್ಗ***

ಓಬಿರಾಯನ ಕಾಲಕ್ಕೂ, ಇಂದಿನ ಕಾಲಕ್ಕೂ ವ್ಯತ್ಯಾಸವೇನಿದೆ?

ಅಂದು ಸಮರಸವೇ ಜೀವನ, ಇಂದು ಸಮರವೇ ಜೀವ.

***ಸೂರ್ಯಕಾಂತ್, ಮೈಸೂರು***

ಬದುಕು ಸುಂದರವಾಗುವುದು ಯಾವಾಗ?

ಹೊಂದಾಣಿಕೆ ಎಂಬ ಮೇಕಪ್ ಧರಿಸಿದಾಗ

***ರಾಜಣ್ಣ, ಹುಬ್ಬಳ್ಳಿ***

ಮಾಧ್ಯಮಗಳಲ್ಲಿ ಜಾಹೀರಾತು ನಿಷೇಧಿಸಿದರೆ ಏನಾಗುತ್ತದೆ?

ಸುಂದರ ರೂಪದರ್ಶಿಯರ ದರ್ಶನ ತಪ್ಪಿ ಬೋರ್ ಆಗುತ್ತೆ ಅಷ್ಟೆ.

***ಅಂಜಲಿ, ತುಮಕೂರು***

ಈ ಜನ ಸುಳ್ಳು ಹೇಳುವವರನ್ನೇ ಶಾಸಕರಾಗಿ, ಸಂಸದರಾಗಿ ಏಕೆ ಆರಿಸುತ್ತಾರೆ?

ನಿಜ ಹೇಳುವವನನ್ನೇ ಆರಿಸಬಹುದಾಗಿತ್ತು, ಆದರೆ ಅವನು ತ್ರೇತಾಯುಗದಲ್ಲೇ ಸತ್ತು ಹೋದನಲ್ಲ.

***ಮಹದೇವ, ಚಾಮರಾಜನಗರ***

ಬದುಕಿನಲ್ಲಿ ನಿರೀಕ್ಷೆಗಳು ಸುಳ್ಳಾಗುತ್ತಾ ಹೋದರೆ ಏನಾಗುತ್ತದೆ?

ಹೊಸ ನಿರೀಕ್ಷೆಗಳನ್ನು ಹುಟ್ಟಿಸಿಕೊಳ್ಳಿ. ಮನುಷ್ಯ ಸಾಯುವುದಕ್ಕೆ ಮುಂಚೆ ಸಾಯಬಾರದು.

***ಸುಗಂಧಿನಿ, ಬೆಂಗಳೂರು***

ರಾಮ-ಲಕ್ಷ್ಮಣರಿಗಿಂತ ಆಂಜನೇಯನಿಗೆ ಹೆಚ್ಚು ಪೂಜೆ ಏಕೆ?

ಇದು ಸರ್ಕಾರಿ ನಿಯಮ. ಕೆಳಗಿನವರನ್ನು ಸರಿಯಾಗಿ ನೋಡಿಕೊಂಡರೇನೇ ಮೇಲಿನವರಿಂದ ಕೆಲಸ ಆಗೋದು.

***ರಮೇಶ ಶಾಸ್ತ್ರಿ, ಹಾಸನ***

ನಾನು ಜ್ಯೋತಿಷ್ಯಾಲಯ ಆರಂಭಿಸಬೇಕೆಂದಿದ್ದೇನೆ. ಆರಂಭಿಸಲೋ ಬೇಡವೋ?

ನೀವು ಮೀನ ಮೇಷದ ಕಡೆ ಚಿಂತಿಸಬೇಡಿ. ಕುರಿಗಳಿಗೇನು ಕೊರತೆಯಿಲ್ಲ. ನಡೆಯಲಿ ನಿಮ್ಮ ಕಾರ್ಯ.

***ಸಾವಿತ್ರಿ ರಾವ್, ಬೆಂಗಳೂರು***

ಉಪ್ಪು ಅಥವಾ ಸ್ತ್ರೀ ಎರಡರಲ್ಲಿ ಯಾವುದು ಹೆಚ್ಚು?

ನಂಗೊತ್ತಿಲ್ಲ. ಆದರೆ ಎರಡರಿಂದಲೂ ಬಿಪಿ ಹೆಚ್ಚು.

***ಆನಂದ, ಬೆಳಗಾಂ***

ಮೊದಲ ರಾತ್ರಿಗೂ, ಕೊನೆಯ ರಾತ್ರಿಗೂ ವ್ಯತ್ಯಾಸವೇನು?

ಮೊದಲ ರಾತ್ರಿ ಉತ್ಸಾಹ, ಕೊನೆಯ ರಾತ್ರಿ ಉತ್ಸವ.



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ನನ್ನ ಹೆಸರು ರಾಮಾಶಾಸ್ತ್ರಿ. ನಮ್ಮುಡ್ಗನ ಹೆಸ್ರು ರಾಮಸಿಂಹಯ್ಯ. ಅವ್ನು ಪತ್ರಿಕಾ ಕಚೇರಿಯಲ್ಲಿ ಪತ್ರಕರ್ತನಾಗಿ ಕೆಲ್ಸ ಮಾಡ್ತಾ ಇದಾನೆ. ಈಗ ಆಕ್ಸಿಡೆಂಟ್ ಆಗಿ ದೊಡ್ಡಾಸ್ಪತ್ರೆ ಸೇರ್‍ಕೊಂಡಿದಾನೆ. ನಾನು ಅವರಪ್ಪ, ನಿಮ್ಹತ್ರ ಬಂದು ವಿಚಾರಣೆ ಮಾಡ್ತಾ ಇದೀನಿ...

ವಿಚಾರಣಾ ವ್ಯಕ್ತಿ: ಪರವಾಗಿಲ್ಲ ಶಾಸ್ತ್ರಿಗಳೇ ತುಂಬಾ ಜೋಕ್ಸ್ ಮಾಡ್ತೀರಾ ನೀವು.

ರಾಮಾಶಾಸ್ತ್ರಿಗಳು: ಅಯ್ಯೋ ನಾನು ಮಾತಾಡ್ತಾ ಇರೋದು ನಿನಗೆ ಹಾಸ್ಯ ಅನ್ಸುತ್ತಾ? ಏನು ನನ್ನ ಪರಿಸ್ಥಿತೀನ ಅರ್ಥ ಮಾಡ್ಕೊಳ್ಳೋದಿಲ್ವಲ್ಲ ನೀವು.

ವಿಚಾರಣಾ ವ್ಯಕ್ತಿ: ಹೋಗ್ಲಿ ಬಿಡಿ ಶಾಸ್ತ್ರಿಗಳೇ, ನೀವು ಹಿರಿಯರು ಹೇಗೆ ಮಾತಾಡುದ್ರೂ ನಡೆಯುತ್ತೆ. ನಮಗ್ಯಾಕೆ ಬೇಕು ನಿಮ್ಮಗ ವಾರ್ಡ್ ನಂಬರ್ 9 ಬೆಡ್ ನಂಬರ್ 9ರಲ್ಲಿ ಇದಾನೆ ಅಂತ ಹೇಳಿಬಿಟ್ಟ.

ರಾಮಾಶಾಸ್ತ್ರಿಗಳು: ಪುಟುಪುಟು ಹೆಜ್ಜೆ ಇಟ್ಕೊಂಡು ವಾರ್ಡ್ ನಂಬರ್ 9ಕ್ಕೆ ಬಂದ್ರು. 9ನೇ ನಂಬರ್ ಬೆಡ್ ಮೇಲೆ ರಾಮಸಿಂಹಯ್ಯ ಮಲ್ಗಿದ್ದ. ಮುಖದಲ್ಲೆಲ್ಲಾ ರಕ್ತ ಕಾಣ್ತಿತ್ತು. ನರ್ಸು-ಡಾಕ್ಟ್ರು ಇಬ್ರೂ ಸೇರಿಕೊಂಡು ಬ್ಯಾಂಡೇಜ್ ಕಟ್ತಿದ್ರು. ಡಾಕ್ಟ್ರೇ ಅಯ್ಯೋ, ಅಯ್ಯೋ ನಮ್ಮ ಹುಡುಗನ್ಗೆ ಹೇಗಿದೆ?

ಡಾಕ್ಟ್ರು: ನೀವ್ಯಾರು, ನಿಮ್ಗೇನು? ಈ ಪೇಷೆಂಟು ನಿಮಗೇನಾಗ್ಬೇಕು ಅಂತ ಕೇಳಿದ್ರು.

ರಾಮಾಶಾಸ್ತ್ರಿಗಳು: ಕೆಳಗಡೆ ಇರೋವ್ರು ಕೇಳುದ್ರು ನಿಮ್ಗೇನಾಗ್ಬೇಕು ಅಂತ. ಈಗ ನೀವೂ ಕೇಳ್ತಾ ಇದೀರಾ ನಿಮ್ಗೇನಾಗ್ಬೇಕು ಅಂತ. ಇವ್ನು ನನ್ಮಗ. ಇವ್ನ ಹೆಸ್ರು ರಾಮಸಿಂಹಯ್ಯ ಪತ್ರಕರ್ತನಾಗಿ ಕೆಲ್ಸ ಮಾಡ್ತಾ ಇದಾನೆ. ಈಗ ಬೆಡ್ ಮೇಲೆ ಮಲ್ಕೊಂಡಿದಾನೆ.

ಡಾಕ್ಟ್ರು: ವಾಟ್ ಎ ಜೋಕ್ ಶಾಸ್ತ್ರಿ ಅಂತ ಡಾಕ್ಟ್ರು ಗೇಲಿ ಮಾಡುದ್ರು. ನೀವೇನೂ ಹೆದುರ್ಕೋ ಬೇಡಿ ಹುಷಾರಾಗ್ತಾನೆ. ಈಗ ನಿದ್ದೆ ಬರುವ ಇಂಜೆಕ್ಷನ್ ಕೊಟ್ಟಿದೀವಿ ಅಂತ ಹೇಳಿ ಬೇರೆ ಪೇಷೆಂಟ್‌ನತ್ತ ನಡುದ್ರು.

ರಾಮಾಶಾಸ್ತ್ರಿಗಳು: ಮನೆಗ್ಹೋಗಿ ಹೆಂಡ್ತಿ ಸೀತನಿಗೆ ಹೇಳಿ ನೋಡೇ ದೊಡ್ಡಾಸ್ಪತ್ರೆ ವಾರ್ಡ್ ನಂಬರ್ 9 ಬೆಡ್ ನಂಬರ್ 9 ಇಲ್ಲಿ ಮಲ್ಕೊಂಡಿದಾನೆ. ಡಾಕ್ಟ್ರು ನಿದ್ದೆ ಬರೋ ಇಂಜೆಕ್ಷನ್ ಕೊಟ್ಟಿದ್ದಾರಂತೆ. ನಾನು ಆಸ್ಪತ್ರೆಗೆ ಹೋಗ್ತೀನಿ ಅದೇ ಅವ್ಳು ಇದಾಳಲ್ಲ ನಿನ್ನ ಮುದ್ದಿನ ಮಗಳು ರಮ್ಯ ಅವ್ಳ ಕೈಲಿ ಅದೇ ನಮ್ಮನೇದು ಹುಣಿಸೆಸಾರು ಅದೇ ಅನ್ನ ಕೊಟ್ಟು ಕಳ್ಸು ಅಂತ ಹೆಡ್ತೀಗೆ ರಾಗವಾಗಿ ಬೈದು ಹೋದ್ರು.

ರಮ್ಯ: ಸಾಯಂಕಾಲ 6 ಗಂಟೆಗೆ ಕಾಲೇಜು ಮುಗುಸ್ಕೊಂಡು ಬಂದ್ಲು. ಏನ್ಪಾಟಾನೋ ಏನೋ ಅದೇ ರಾಗ ಅದೇ ಹಾಡು. ಹುಡುಗರ್‍ನ ಕಂಡ್ರೆ ಹುಡ್ಗೀರು ನಗೀತಾರೆ, ಹುಡ್ಗೀರ್‍ನ ಕಂಡ್ರೆ ಹುಡ್ಗುರು ನಗೀತಾರೆ. ಸ್ವಲ್ಪಾನೂ ವಿವೇಕಾನೇ ಇಲ್ಲ. ಅವ್ರಾದ್ರೂ ಹಾಳಾಗಿ ಹೋಗ್ಲಿ, ನಮಗ್ಯಾಕೆ ಹಿಂಸೆ ಕೊಡ್ತಾರೋ ಪಾಠ ಕೇಳೋಕೇ ಬಿಡಲ್ಲ ಗೊಣಕ್ಕೊಂಡು ರೂಮಿನ ಒಳಗೆ

ಹೋದ್ಲು. ಕಾಲೇಜಿನ ಡ್ರೆಸ್‌ನ ಬಿಚ್ಚಾಕಿ ಫ್ರೆಷ್ ಆಗಿ ಮುಖ ತೊಳ್ಕೊಂಡು ಕಾಫಿ ಕೊಡಮ್ಮಾ ಅಂತ ಕೂಗಿದ್ಲು.

ಸೀತಮ್ಮ: ಲೇ ರಮ್ಯ ನಿಮ್ಮಪ್ಪ ಆಸ್ಪತ್ರೆಗೆ ಹೋಗಿದಾರೆ.

ರಮ್ಯ: ಹ್ವಾ ಹ್ವಾ ಯಾಕಮ್ಮ ಅಪ್ಪ ಆಸ್ಪತ್ರೆಗೆ ಹೋದ್ರು ಅವ್ರ್ಗೇನಾದ್ರು ಮೈ ಸರೀ ಇಲ್ವಾ, ರಾತ್ರಿ ಅಣ್ಣ ಯಾಕಮ್ಮ ಬರ್ಲಿಲ್ಲ...

ಸೀತಮ್ಮ: ನಿಮ್ಮಣ್ಣನ್ಗೆ ಆಕ್ಸಿಡೆಂಟ್ ಆಗಿದ್ಯಂತೆ ದೊಡ್ಡಾಸ್ಪತ್ರೇಲಿ ವಾರ್ಡ್ ನಂಬರ್ 9 ಬೆಡ್ ನಂಬರ್ 9ರಲ್ಲಿ ಅಡ್ಮಿಟ್ ಆಗಿದಾನಂತೆ. ಅಪ್ಪ ರಾತ್ರಿ ಅಲ್ಲೇ ಇರ್ತಾರಂತೆ. ಅವ್ರ್ಗ ಹೋಗಿ ಒಂದಿಷ್ಟು ಅನ್ನ ಸಾಂಬಾರು ಕೊಟ್ಬುಟ್ ಬಾ ಅಂತ ಅವ್ಳ ಕೈಲಿ ಟಿಫಿನ್ ಕ್ಯಾರಿಯರ್ ಕೊಟ್ಟು ಕಳುಸುದ್ಲು.

ರಮ್ಯ: ಅಪ್ಪನಿಗೆ ಊಟ ತೊಗೊಂಡು ಬಂದು ಕೊಟ್ಲು, ನಾನು ಬೆಳಿಗ್ಗೆ ಬರ್ತೀನಪ್ಪಾ ಅಂತ ಹೇಳಿ ಮನೆಗೆ ಬಂದ್ಲು.

ನಾರದರು: ರಾಮಸಿಂಹಯ್ಯ ಬಾಗಿಲ್ ತೆಗಿಲೇ ಇಬ್ರುದೂ ಡ್ಯೂಟಿ ಮುಗೀತು. ಹೋಗಬೇಕೀಗ. ಬಾಗಿಲು ತೆಗಿ.

ರಾಮಸಿಂಹಯ್ಯ: ಬಾಗಿಲು ತೆಗೆದ ಇಬ್ರೂ ಸರ್ರಂತ ಯಮಲೋಕಕ್ಕೆ ಹೋದ್ರು.

ನಾರದ: ನಾರಾಯಣ ನಾರಾಯಣ ನಾರಾಯಣ ಅಂತ ಗಾನ ಮಾಡ್ಕೊಂಡು ಯಮನ ಪಟ್ಣ ಸೇರುದ್ರು.

ಚಿತ್ರಗುಪ್ತ: ನಾರದ ಮಹರ್ಷಿಗಳಿಗೆ ಪ್ರಣಾಮಗಳು. ಪೂಜ್ಯರೇ ನೀವು ಇಷ್ಟು ದಿನ ಎಲ್ಲಿ ಹೋಗಿದ್ದಿರಿ ನರಕೀಟದ ಬಾಧೆ ತಪ್ಪಿತೆ ಎಂದು ಕೇಳಿದರು.

ನಾರದರು: ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡ ಎಂಬ ನಾಣ್ನುಡಿಯಂತೆ ಇಗೋ ನನ್ನ ಜೊತೆಯಲ್ಲಿ ವಕ್ಕರಿಸಿಕೊಂಡಿದ್ದಾನೆ. ಈ ಕೀಟವನ್ನು ರಿಪೇರಿ ಮಾಡಲು ಪ್ರಯತ್ನಿಸಿದ್ದೆ... ಊಹೂ....

ಚಿತ್ರಗುಪ್ತ: ನಾರದರೆ ನಾನು ಭೂಲೋಕಕ್ಕೆ ಹೋಗುತ್ತೇನೆ. ನಾನು ಬರುವ ತನಕ ನೀವು ಜಾಗ್ರತೆಯಾಗಿರಿ ಎಂದು ಹೇಳಿ ಹೋದ.

ನಾರದರು: ನಾರಾಯಣ ನಾರಾಯಣ ನಾರಾಯಣ ಗಾನ ಮಾಡುತ್ತಾ ಯಮನ ಆಸ್ಥಾನಕ್ಕೆ ಬಂದರು.

ಯಮ: ಪೂಜ್ಯರಿಗೆ ನಮಸ್ಕಾರ ಭೂಲೋಕದಲ್ಲಿ ಎಲ್ಲರೂ ಕ್ಷೇಮವೇ ಈ ನರಕೀಟವನ್ನು ಮತ್ತೆ ಕರೆದುಕೊಂಡು ಬಂದ್ರಾ, ಅಲ್ಲೇ ಎಲ್ಲಾದ್ರೂ ಮಸಣದಲ್ಲಿ ಬಿಟ್ಟು ಬರಬಾರದೇ.

ನಾರದ: ಯಮರಾಜ. ಇವನು ಮಹಾ ಘಟಿಂಗ. ಇವನ ದೇಹ ಕಾಣುತ್ತಿಲ್ಲ.

ನರಕೀಟ: ಲೋ ಯಮ ನನ್ನ ಬಾಡೀನ ಎಲ್ಲೋ ಮುಚ್ಚಿಟ್ಟಿದ್ಯಾ ನೀನು ತಂದ್ಕೊಡ್ದೆ ಹೋದ್ರೆ ನಿಮ್ಮನ್ನೆಲ್ಲಾ ಫುಟ್ಬಾಲ್ ಆಡ್ತೀನಿ. ನಿಮ್ಮ ಲೋಕಾನ ಅಲ್ಲೋಲ ಕಲ್ಲೋಲ ಮಾಡ್ತೀನಿ ಎಂಬ ಬೆದರಿಕೆ ಒಡ್ಡಿದ.

ಯಮ: ಇಂಗು ತಿಂದ ಮಂಗನಂತೆ ಪೆಚ್ಚು ಮೋರೆ ಹಾಕಿ ಕುಳಿತ. ನಾಳೆ ಸಭೆ ನಡೆಸೋಣವೆಂದು ಮನದಲ್ಲಿ ಲೆಕ್ಕ ಹಾಕಿ ಸುಮ್ಮನಾದ.

*(ಮುಂದುವರೆಯುವುದು)*





# ಸೀಬೆ ಫೇಸ್‌ಪ್ಯಾಕ್



ಸೀಬೆಹಣ್ಣು, ಸೀಬೆಕಾಯಿ ಮಕ್ಕಳಾದಿಯಾಗಿ ಎಲ್ಲರೂ ಇಷ್ಟಪಡುವಂಥದ್ದು. ಇದು ತಿನ್ನಲು ಮಾತ್ರ ಯೋಗ್ಯ ಎಂದು ಭಾವಿಸಿದರೆ ನಿಮ್ಮ ಲೆಕ್ಕಾಚಾರ ತಪ್ಪು. ಇದು ಸೌಂದರ್ಯವರ್ಧನೆಗೂ ಪೂರಕ. ಇದರ ಫೇಸ್‌ಪ್ಯಾಕ್ ಸೌಂದರ್ಯವನ್ನೂ ಇಮ್ಮಡಿಸುತ್ತದೆ, ತ್ವಚೆಯ ಆರೋಗ್ಯ ಕಾಪಾಡಿ ತಾಜಾತನವನ್ನೂ ಉಳಿಸಿಕೊಳ್ಳುತ್ತದೆ. ಸೀಬೆಹಣ್ಣು, ಸೀಬೆಕಾಯಿಯನ್ನು ಸೇವಿಸುವುದರಿಂದ ಹಲವಾರು ರೀತಿಯ ಲಾಭಗಳಿವೆ. ಪ್ರತಿದಿನ ಈ ಹಣ್ಣನ್ನು ತಿಂದರೆ ಯಾವುದೇ ರೀತಿಯ ದುಷ್ಪರಿಣಾಮಗಳಿಲ್ಲದೆಯೇ ದೇಹದ ತೂಕವನ್ನು ಇಳಿಸಬಹುದು. ಹಣ್ಣಿನಲ್ಲಿ ಪೌಷ್ಟಿಕಾಂಸಗಳ ಭಂಡಾರವೇ ಅಡಗಿದೆ. ಇದರಲ್ಲಿ ಸಿಗುವ ವಿಟಮಿನ್ ಎ ಕಣ್ಣಿನ ಸೌಂದರ್ಯವನ್ನು ಹೆಚ್ಚಿಸುತ್ತದೆ. ವಿಟಮಿನ್ ಸಿ, ಬಿ3, ಬಿ5, ಬಿ6 ಚರ್ಮ ಹಾಗೂ ಕೂದಲಿನ ಅಂದ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಈ ಹಣ್ಣಿನಿಂದ ತಯಾರಿಸಿದ ಜ್ಯೂಸ್‌ಅನ್ನು ಕುಡಿದರೆ ಸೂರ್ಯನ ಕಿರಣಗಳಿಂದ ಚರ್ಮಕ್ಕೆ ಉಂಟಾಗುವ ಹಾನಿಯನ್ನು ತಪ್ಪಿಸಬಹುದು. ಕೆಂಪಾದ ಸೀಬೆಹಣ್ಣನ್ನು ನಿತ್ಯವೂ ಸೇವಿಸಿದರೆ ನಿಮ್ಮ ತ್ವಚೆಯ ಬಣ್ಣ ಉತ್ತಮಗೊಳ್ಳುತ್ತದೆ.

ಇದರ ಎಲೆಗಳನ್ನು ಪ್ರತಿನಿತ್ಯದ ಆಹಾರದಲ್ಲಿ ಬಳಸಿದರೆ ಅತಿಯಾದ ಬೊಜ್ಜು ಕರಗಿಸಬಹುದು. ಹಾಗೆಯೇ ಡಯಾಬಿಟೀಸ್ ಅನ್ನು ನಿಯಂತ್ರಿಸಲು ಈ ಎಲೆಗಳು ಸಹಕಾರಿ.

**ಸೀಬೆ ಫೇಸ್‌ಪ್ಯಾಕ್**

★ ಹಣ್ಣಿನ ತಿರುಳನ್ನು ಮುಖಕ್ಕೆ ಲೇಪಿಸಿ 10 ನಿಮಿಷದ ನಂತರ ತೊಳೆದರೆ ಚರ್ಮ ಹೊಳೆಯುತ್ತದೆ. ವಾರಕ್ಕೆ ಎರಡು ಬಾರಿ ಪ್ಯಾಕ್ ಬಳಸಿ.

★ ಒಂದು ಚಮಚ ಸಕ್ಕರೆಯ ಜೊತೆ ಸೀಬೆಯ ತಿರುಳನ್ನು ಬೆರೆಸಿ ಸ್ಕ್ರಬ್ ಆಗಿ ಬಳಸಿ ಐದು ನಿಮಿಷ ನಿಧಾನವಾಗಿ ಮಸಾಜ್ ಮಾಡಿ ತಣ್ಣೀರಿನಲ್ಲಿ ತೊಳೆಯಿರಿ.

★ ಇದರ ಸಿಪ್ಪೆಯನ್ನು ಹಾಲಿನಲ್ಲಿ ಅರೆದು ಪ್ಯಾಕ್ ಮಾಡಿಕೊಂಡು ಹಚ್ಚಿ. ಅದು ಒಣಗಿದ ಬಳಿಕ ಬೆಚ್ಚನೆಯ ನೀರಿನಲ್ಲಿ ತೊಳೆದರೆ ಒಣಚರ್ಮದ ಸಮಸ್ಯೆ ಇರುವುದಿಲ್ಲ.

*(ಪ್ರಮೀಳಾ, ಬೆಂಗಳೂರು)*

ಏಪ್ರಿಲ್ 2017ರಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

1. ಸೌಜನ್ಯ, ಮೈಸೂರು
2. ಹರಿಪ್ರಿಯ, ಮಂಡ್ಯ
3 ಶುಭಾಂಗಿನಿ, ಹಾಸನ
4 ವಿನಯ, ಬೆಂಗಳೂರು
5 ಲೋಲಾಕ್ಷಿ, ಸಕಲೇಶಪುರ
6 ಯೋಗಲಕ್ಷ್ಮಿ, ಬೇಲೂರು
7 ಮೇನಕಾ, ಶಿವಮೊಗ್ಗ
8 ಭಾನುಮತಿ, ಮೈಸೂರು
9 ನಿರುಪಮ, ಹೊಸಪೇಟೆ
10 ತಮಸ್ವಿನಿ, ಹೈದರಾಬಾದ್
11 ಪೂವಮ್ಮ, ಮಡಿಕೇರಿ
12 ಬಂಗಾರಿ, ಕೋಲಾರ
13 ವಸುಮತಿ, ಸರಗೂರು
14 ಹೇಮಲತಾ, ಮದ್ದೂರು
15 ಶ್ರೀತುಳಸಿ, ಬೆಂಗಳೂರು
16 ವೈಶಾಲಿ, ತಿಪಟೂರು
17 ಯೋಗಿತಾ, ಮಂಡ್ಯ
18 ಮಂದಿರಾ, ಸೋಮವಾರಪೇಟೆ
19 ಭಾಗ್ಯಶ್ರೀ, ಕಾರವಾರ
20 ಜಯಸುಂದರಿ, ಮದುರೈ
21 ದೇವಕಿ, ನ್ಯೂ ಡೆಲ್ಲಿ
22 ಪ್ರಜ್ಞಾ, ಬಳ್ಳಾರಿ
23 ಮೂಕಾಂಬಿಕಾ, ಕುಂದಾಪುರ
24 ಹೇಮಲತಾ, ಚನ್ನಪಟ್ಟಣ
25 ರಂಗನಾಯಕಿ, ಮೇಲುಕೋಟೆ
26 ಶಶಿರೇಖಾ, ತುಮಕೂರು
27 ವಿಶಾಖ, ಕಡೂರು
28 ಲಲಿತಶ್ರೀ, ಬೆಂಗಳೂರು
29 ರೂಪಿಣಿ, ಆನೇಕಲ್
30 ಸಂಪತ್ಕುಮಾರಿ, ಮೈಸೂರು

## ಬೇರೆಯವರಿಗೆ ಕೇಡು ಬಯಸಿದರೆ ನಮಗೇ ಕೇಡು

ಒಂದಾನೊಂದು ಕಾಲದಲ್ಲಿ ಇರುವೆಗಳೆಲ್ಲಾ ಒಟ್ಟಾಗಿ ಸೇರಿ ಒಂದು ಸಭೆ ನಡೆಸಿದವು. ಆ ಸಭೆಯಲ್ಲಿದ್ದ ಎಲ್ಲರಿಗಿಂತ ಹಿರಿಯ ಇರುವೆ ಹೀಗೆಂದು ಹೇಳಿತು.

'ಸ್ನೇಹಿತರೇ, ಪ್ರಪಂಚದಲ್ಲಿ ನಮ್ಮನ್ನು ಎಲ್ಲಾ ಪ್ರಾಣಿ-ಪಕ್ಷಿಗಳು ಕಂಡಲ್ಲೆಲ್ಲಾ ಸಾಯಿಸುತ್ತಿದ್ದಾರೆ. ಹೀಗೆಯೇ ಮುಂದವರಿದರೆ ಒಂದು ದಿನ ನಮ್ಮ ಸಂತತಿ ನಶಿಸಿ ಹೋಗುತ್ತದೆ. ಆದ್ದರಿಂದ ನಾವೆಲ್ಲರೂ ಸೇರಿ ದೇವರಲ್ಲಿ ನಾವು ಕಚ್ಚಿದ ತಕ್ಷಣ ಯಾವ ಪ್ರಾಣಿಯೇ ಆಗಲಿ ಅದು ಸಾಯಬೇಕೆಂದು ಪ್ರಾರ್ಥಿಸಿ ತಪಸ್ಸು ಮಾಡೋಣ' ಎಂದಿತು.

ಹಾಗೇ ಆಗಲಿ ಎಂದು ಎಲ್ಲಾ ಇರುವೆಗಳು ದೇವರನ್ನು ಕುರಿತು ತಪಸ್ಸು ಮಾಡತೊಡಗಿದವು. ಇರುವೆಗಳ ಭಕ್ತಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾಗಿ 'ಏನು ವರ ಬೇಕು?' ಎಂದು ಕೇಳಿದನು.

ಆಗ ಇರುವೆಗಳಿಗೆ ತಕ್ಷಣ ಏನು ಕೇಳಿಕೊಳ್ಳಬೇಕೆಂದು ಗಲಿಬಿಲಿಯಾಗಿ ನಮ್ಮಿಂದ ಕಚ್ಚಿಸಿಕೊಂಡವರು ಸಾಯಬೇಕೆಂದು ಕೇಳಿಕೊಳ್ಳುವ ಬದಲು ನಾವು ಕಚ್ಚಿದ ತಕ್ಷಣ ನಾವೇ ಸಾಯುವಂತೆ ವರ ಕೊಡು ಎಂದು ಕೇಳಿಕೊಂಡವು. ದೇವರು ಮನದಲ್ಲಿಯೇ ನಕ್ಕು 'ತಥಾಸ್ತು' ಎಂದು ಹೇಳಿ ಮಾಯವಾದನು.

ಈ ರೀತಿ ವರ ಕೋರಿದುದರ ಪರಿಣಾಮವಾಗಿ ಏನಾಯ್ತು ಗೊತ್ತು ತಾನೆ? ಇರುವೆಗಳು ಕಚ್ಚಿದ ತಕ್ಷಣ ಕಚ್ಚಿಸಿಕೊಂಡವರು ಅದನ್ನು ಹೊಸಕಿ ಹಾಕುತ್ತಾರೆ, ಸಾಯಿಸುತ್ತಾರೆ.



# ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ

## ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

### ಸರಿಯಾದ ತಿಳುವಳಿಕೆಯಿಲ್ಲದವರ ಮಾರ್ಗದರ್ಶನ

ಇದು ಕೆಲವೊಂದು ವ್ಯಕ್ತಿಗಳ ಪ್ರವೃತ್ತಿ. ತನಗೆ ಸರಿಯಾದ ಜ್ಞಾನವಿಲ್ಲದಿದ್ದರೂ ಬೇರೆಯವರಿಗೆ ಬೋಧಿಸಿ ಪ್ರಯೋಗ ಮಾಡುವುದು, ಕೆಲವೊಬ್ಬ ಪ್ರಬುದ್ಧರು ಬೇರೆಯವರಿಗೆ ಇಷ್ಟು ಸಕ್ಕರೆ ಅಂಶವಿದ್ದರೆ ಏನು ತೊಂದರೆಯಿಲ್ಲ, ಇದಕ್ಕೆ ವೈದ್ಯರೇಕೆ? ನಾನು ಹೇಳಿದಂತೆ ಮಾಡು. ಈ ಎಲೆ ತಿನ್ನು, ಹೀಗೆ ಮಾಡು, ಈ ಕಷಾಯ ಕುಡಿ ಇತ್ಯಾದಿ ಅಸಂಬದ್ಧ ಮಾತುಗಳನ್ನು ಹೇಳಿ ಸರಿಯಾಗಿ ನಡೆಯುವ ರೋಗಿಗಳನ್ನು ಸಹ ದಿಕ್ಕು ತಪ್ಪಿಸಿಬಿಡುತ್ತಾರೆ. ಇದು ಕೆಲವರಿಗೆ ಚಟ ಎಂದರೂ ತಪ್ಪಾಗಲಾರದು. ನನ್ನ ನಿವೇದನೆ ಏನೆಂದರೆ ನೀವು ಎಷ್ಟೇ ಬುದ್ಧಿವಂತರಾದರೂ ಅಥವಾ ಕಾಯಿಲೆ ಸ್ವರೂಪವನ್ನು ಅರೆದು ಕುಡಿದಿದ್ದರೂ ದಯವಿಟ್ಟು ಬೇರೆಯವರ ಮೇಲೆ ಪ್ರಯೋಗಿಸಬೇಡಿ. ರೋಗಿಗಳಿಗೆ ಸೂಕ್ತ ವೈದ್ಯರನ್ನು ಕಾಣಲು ಹೇಳಿ. ಹಾಗೆಯೇ ಅವರ ಜೀವನ ಶೈಲಿಯನ್ನು (ಕೆಟ್ಟ ಹವ್ಯಾಸಗಳನ್ನು) ತಿದ್ದಲು ಪ್ರಯತ್ನಿಸಿ. ಯಾವುದೇ ಕಾರಣಕ್ಕೂ ಚಿಕಿತ್ಸೆ ನೀಡುವುದಾಗಲೀ ಬೇರೆ ಅನಗತ್ಯ ವಿಷಯಗಳನ್ನು ರೋಗಿಯ ಮನಸ್ಸಿನಲ್ಲಿ ತುಂಬಿ ಹೆದರಿಕೆ ಉಂಟುಮಾಡುವುದಾಗಲೀ ದಯವಿಟ್ಟು ಮಾಡಬಾರದು.

### ಸಕ್ಕರೆ ಕಾಯಿಲೆ ಅಂಟು ಜಾಡ್ಯ

ಈ ರೀತಿ ತಿಳಿದುಕೊಂಡು ಅನೇಕ ಮನೆಗಳಲ್ಲಿ ಸಂಬಂಧಗಳೇ ಮುರಿದು ಹೋಗಿದೆ. ಸಕ್ಕರೆ ಕಾಯಿಲೆ ವ್ಯಕ್ತಿಯ ಒಂದು ಪ್ರಾಕೃತಿಕ ದೋಷ. ಇದು ಕ್ರಿಮಿಗಳಿಂದ ಬರುವ ಕಾಯಿಲೆಯಲ್ಲ. ಇದು ಒಂದು ಸಮಸ್ಯೆಯಷ್ಟೆ. ಇದು ಒಬ್ಬರಿಂದ ಒಬ್ಬರಿಗೆ ಹರಡುವುದಿಲ್ಲ. ತಟ್ಟೆಯಲ್ಲಿ ಊಟ ಮಾಡಿದರೆ ಅಂಟುವುದಿಲ್ಲ. ನೀರು ಕುಡಿದರೆ ಅಂಟುವುದಿಲ್ಲ. ಇಂತಹ ವಿಚಾರ ಬಹಳ ತಪ್ಪು ಎಂದು ಪ್ರತಿಯೊಬ್ಬ ಮಧುಮೇಹಿಯು ಬೇರೆಯವರಿಗೆ ಹೇಳಬೇಕು.

### ಮಧುಮೇಹಿಗಳು ಅನ್ನ ತಿನ್ನಬಾರದು ಹಾಗೂ ಹಣ್ಣುಗಳನ್ನು ತಿನ್ನಬಾರದು

ಹೆಚ್ಚಿನ ಮಧುಮೇಹಿಗಳಲ್ಲಿ ಇಂತಹ ಒಂದು ತಪ್ಪು ಕಲ್ಪನೆ ಇದೆ. ಅನ್ನ ತಿನ್ನಬಾರದು ಹಾಗೂ ಹಣ್ಣುಗಳನ್ನು ತಿನ್ನಬಾರದು ಇತ್ಯಾದಿ. ಅನ್ನ ತಿನ್ನಬಾರದು ಎಂದು ಯಾವ ವೈದ್ಯರೂ ಹೇಳುವುದಿಲ್ಲ. ಆದರೆ ತಿಂದರೆ ಎಷ್ಟು ತಿನ್ನಬೇಕು ಹಾಗೂ ಏಕೆ ಬರೀ ಅನ್ನ ತಿನ್ನಬಾರದು ಎಂಬುದನ್ನು ರೋಗಿಗಳು ತಿಳಿದುಕೊಳ್ಳಬೇಕು. ಹೊಟ್ಟಿನಂಶ ಹೆಚ್ಚಿರುವ ಆಹಾರ ಸೇವಿಸಿದಾಗ ಆಹಾರದ ಪಚನಕ್ರಿಯೆ ನಿಧಾನವಾಗಿ ಆಗಿ ರಕ್ತದಲ್ಲಿ ಸಕ್ಕರೆ ಅಂಶ ನಿಧಾನವಾಗಿ ಹೆಚ್ಚಾಗುತ್ತದೆ. ಇದು ಹೆಚ್ಚಾಗಿ ರಾಗಿ, ಗೋಧಿ ಹಾಗೂ ಜೋಳದಲ್ಲಿ ಇರುತ್ತದೆ. ಅಕ್ಕಿಯಲ್ಲಿ ಹೊಟ್ಟಿನಂಶ ಇಲ್ಲದಿರುವುದರಿಂದ ತಕ್ಷಣ ಜೀರ್ಣವಾಗಿ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗುವುದರ ಜೊತೆಗೆ ಶೀಘ್ರವಾಗಿ ಹೊಟ್ಟೆ ಹಸಿವಾಗುತ್ತದೆ. ಆಗ ಮತ್ತೆ ಊಟ ಮಾಡಬೇಕಾಗುತ್ತದೆ. ಇಂತಹ ಸಮಯಗಳಲ್ಲಿ ರಕ್ತದಲ್ಲಿರುವ ಸಕ್ಕರೆ ಅಂಶ ಜೀವಕೋಶಗಳಿಗೆ ರವಾನಿಸಲು ಹೆಚ್ಚು ಇನ್ಸುಲಿನ್ ಅವಶ್ಯಕತೆ ಬೀಳುತ್ತದೆ. ಇನ್ಸುಲಿನ್ ಕೊರತೆ ಇದ್ದಾಗ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚು ಕಂಡುಬರುತ್ತದೆ. ಇದನ್ನು ಸರಿಯಾಗಿ ನಮ್ಮ ರೋಗಿಗಳು ಅರ್ಥ ಮಾಡಿಕೊಂಡು ಎಷ್ಟು ಅನ್ನ ತಿನ್ನಬೇಕು ಎಂಬುದನ್ನು ನಿಮ್ಮ ವೈದ್ಯರ ಜೊತೆ ಚರ್ಚಿಸಿ ನಿರ್ಧರಿಸಿಕೊಳ್ಳಬೇಕು. ಕುಸುಬಲಕ್ಕಿ ಬಹಳ ಒಳ್ಳೆಯದು.

*(ಮುಂದುವರಿಯುವುದು)*

# ಬೆರಗು ಹುಟ್ಟಿಸುವ ಬೇಸಿಗೆ ಅರಮನೆ



ಟಿಪ್ಪು ಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಎರಡು ಸುಂದರ ಅರಮನೆಗಳನ್ನು ನಿರ್ಮಿಸಿದ್ದ. ಆಡಳಿತ ನಡೆಸಲು ಲಾಲ್‌ಮಹಲ್ ಮತ್ತು ಇದಕ್ಕೆ ಕೇವಲ ಎರಡು ಕಿ.ಮೀ. ದೂರದಲ್ಲಿ ವಿಶ್ರಾಂತಿ ಪಡೆಯಲೆಂದು ದರಿಯಾ ದೌಲತ್ ಎಂಬ ಅರಮನೆಗಳನ್ನು ನಿರ್ಮಿಸಿದ್ದ. ಲಾಲ್‌ಮಹಲ್ ನಾಲ್ಕನೆ ಆಂಗ್ಲೋ-ಮೈಸೂರು ಯುದ್ಧದ ಸಂದರ್ಭದಲ್ಲಿ ಬ್ರಿಟಿಷರ ದಾಳಿಗೆ ಸಿಕ್ಕಿ ನುಚ್ಚುನೂರಾಗಿದೆ. ಈಗ ಅದರ ಅವಶೇಷಗಳು ಮಾತ್ರ ಉಳಿದಿವೆ.

ಐತಿಹಾಸಿಕ ಕುರುಹುಗಳ ಕಣಜದಂತಿರುವ ಶ್ರೀರಂಗಪಟ್ಟಣದಲ್ಲಿ ಸದ್ಯ ಉಳಿದಿರುವ ಟಿಪ್ಪು ಸುಲ್ತಾನನ ಬೇಸಿಗೆ ಅರಮನೆಯನ್ನು ದರಿಯಾ ದೌಲತ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. 2ನೇ ಆಂಗ್ಲೋ-ಮೈಸೂರು ಯುದ್ಧದ್ಲಿ ಪಡೆದ ಗೆಲುವಿನ ನೆನಪಿಗಾಗಿ 1784ರಲ್ಲಿ ಟಿಪ್ಪು ಈ ಆಕರ್ಷಕ ಅರಮನೆಯನ್ನು ನಿರ್ಮಿಸಿದ್ದಾನೆ. ಸುಮಾರು ಮೂರು ಅಡಿ ಎತ್ತರದ ಚಚ್ಚೌಕಾಕಾರದ ಜಗಲಿಯ ಮೇಲೆ ಈ ಅರಮನೆಯನ್ನು ನಿರ್ಮಿಸಲಾಗಿದೆ. ಇದರ ತಳಪಾಯ ಕಂದುಮಿಶ್ರಿತ ಕಲ್ಲುಗಳಿಂದ ನಿರ್ಮಾಣಗೊಂಡಿದೆ. ಮೇಲ್ಭಾಗ ಭಾಗಶಃ ಗೋಡೆ ಮತ್ತು ಬಹುಪಾಲು ಮರಮುಟ್ಟುಗಳಿಂದ ನಿರ್ಮಾಣವಾಗಿದೆ. ಈ ಎರಡು ಅಂತಸ್ತಿನ ಅರಮನೆಯಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ 40 ಅಡಿ ಎತ್ತರದ ಹಾಗೂ ದಪ್ಪ ಗಾತ್ರದ ಗೋಡೆಗಳಿವೆ. ಸುಟ್ಟ ಇಟ್ಟಿಗೆ ಮತ್ತು ಚುರುಕಿ ಗಾರೆ ಬಳಸಿ ಗೋಡೆಗಳನ್ನು ಕಟ್ಟಲಾಗಿದೆ.

**ಪೂರ್ವಗೋಡೆ:** ಈ ಬೇಸಿಗೆ ಅರಮನೆಯ ಪ್ರತಿ ಗೋಡೆಯೂ ಒಂದೊಂದು ಕತೆ ಹೇಳುತ್ತವೆ. ಪೂರ್ವ ಭಿತ್ತಿಯ ಮೇಲೆ ಟಿಪ್ಪು ಸುಲ್ತಾನ್ ಸಮಕಾಲೀನರಾದ ಮುಮ್ಮಡಿ ಕೃಷ್ಣರಾಜ ಒಡೆಯರ್, 2ನೇ ಬಾಲಾಜಿರಾವ್ ಪೇಶ್ವೆ, 5ನೇ ಕೆಂಪೇಗೌಡ, ಚಿತ್ರದುರ್ಗದ



ಮದಕರಿ ನಾಯಕ, ತಂಜಾವೂರಿನ ರಾಜ, ಚಿತ್ತೂರಿನ ರಾಣಿ ಮೊದಲಾದವರನ್ನು ಒಳಗೊಂಡ ದರ್ಬಾರ್ ಸನ್ನಿವೇಶಗಳು ಗಮನ ಸೆಳೆಯುತ್ತವೆ. ಸಾಮಂತ ರಾಜರ ಜತೆಗಿನ ಒಪ್ಪಂದಗಳು, ವಿವಿಧ ಪ್ರಾಂತ್ಯಗಳ ರಾಜಪ್ರತಿನಿಧಿಗಳು, ಅವರಿಗೆ ಸ್ವಾಗತ ಕೋರುವ ದೃಶ್ಯಗಳು ನೈಸರ್ಗಿಕ ಬಣ್ಣದಿಂದ ಚಿತ್ರಿತವಾಗಿವೆ. ಬಿಳಿ, ಹಸಿರು, ಕೆಂಪು ಇತರ ವರ್ಣಗಳಿಂದ ಇವುಗಳನ್ನು ಚಿತ್ರಿಸಲಾಗಿದೆ. ಪುರಾಣಗಳಲ್ಲಿ ಬರುವ ವ್ಯೂಮ ಹೆಸರಿನ ವಿಶಿಷ್ಟ ಜಾಣ್ಮೆಯ ಪಕ್ಷಿಯನ್ನು ಈ ಅರಮನೆಯ ಪೂರ್ವ ಗೋಡೆಯ ಮೇಲೆ ನೋಡಬಹುದು.

**ಪಶ್ಚಿಮ ಗೋಡೆ:** ಅರಮನೆಯ ಪಶ್ಚಿಮ ಗೋಡೆಯನ್ನು ಅಪರೂಪದಲ್ಲಿ ಅಪರೂಪ ಎಂದೇ ಹೇಳಾಗುತ್ತದೆ. ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷರ ನಡುವೆ ನಡೆದ ಮಹತ್ವದ ಯುದ್ಧಗಳ ಸನ್ನಿವೇಶಗಳನ್ನು ಬ್ರಿಟಿಷ್ ಕಲಾವಿದರು ನೈಜ ಎಂಬಷ್ಟರ ಮಟ್ಟಿಗೆ ಚಿತ್ರಿಸಿದ್ದಾರೆ. ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಯುದ್ಧಕ್ಕೆ ತೆರಳುತ್ತಿರುವ ದೃಶ್ಯ ಇಲ್ಲಿದೆ. ಮೈಸೂರು ಸೇನೆ ಮತ್ತು ಬ್ರಿಟಿಷ್ ಸೇನೆ ನಡುವೆ ನಡೆಯುತ್ತಿರುವ ಯುದ, ಮೈಸೂರು ಸೇನೆ ಜತೆಗೆ ಫ್ರೆಂಚ್ ಸೇನಾ ತುಕಡಿಗಳು ಸೇರಿಕೊಂಡಿರುವುದರ ಚಿತ್ರಣವಿದೆ.

ಟಿಪ್ಪು ಸುಲ್ತಾನ್ ಶತ್ರು ಪಾಳಯದ ಮೇಲೆ ಕೊಬ್ಬಿದ ಗೂಳಿಗಳನ್ನು ನುಗ್ಗಿಸಿ ಅಲ್ಲೋಲಕಲ್ಲೋಲ ಮಾಡುತ್ತಿದ್ದ ಎಂಬ ಮಾತಿಗೆ ಈ ಗೋಡೆಯ ಮೇಲೆ ಸ್ಪಷ್ಟವಾದ ಸಾಕ್ಷ್ಯವಿದೆ. ಕಾಲಾಳುಗಳ ಜತೆಗೆ ಗಜ ಮತ್ತು ಅಶ್ವ ಪಡೆ ಧೂಳೆಬ್ಬಿಸಿ ಮುನ್ನುಗ್ಗುತ್ತಿರುವ ಸನ್ನಿವೇಶ ಆಕರ್ಷಕವಾಗಿದೆ. ಬ್ರಿಟಿಷ್ ಸೈನಿಕರು ಆಧುನಿಕ ಶಸ್ತ್ರಾಸ್ತ್ರಗಳ ಜತೆ ಕರ್ನಲ್ ಬೇಯ್‌ಲಿಯ ರಕ್ಷಣೆಗೆ ನಿಂತಿರುವುದು ಕಂಡುಬರುತ್ತದೆ. 1799ರ ಮೇ 4ರಂದು ಶ್ರೀರಂಗಪಟ್ಟಣ ಪತನಗೊಂಡ ಸನ್ನಿವೇಶವನ್ನು ಬ್ರಿಟಿಷ್ ಕಲಾವಿದ ಸರ್ ರಾಬರ್ಟ್ ಪೋರ್ಟರ್ 1800ರ ಸುಮಾರಿಗೆ ಈ ಗೋಡೆಗಳ ಮೇಲೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

**ಮರದ ಅರಮನೆ:** ದರಿಯಾ ದೌಲತ್ ಅರಮನೆಯನ್ನು ಶೇಕಡಾ 80 ಭಾಗ ಮರಗಳನ್ನೇ ನಿರ್ಮಿಸಿ ಕಟ್ಟಲಾಗಿದೆ. ತೇಗ, ಸಾಗುವಾನಿ ಮರಗಳ ಬೃಹತ್ ಸ್ತಂಭಗಳು ಈ ಅರಮನೆಗೆ ಆಧಾರವಾಗಿವೆ. ಛಾವಣಿ, ಮೇಲ್ಕಟ್ಟು, ಚೌಕಟ್ಟು, ಬೋದಿಗೆಗಳು ಕೂಡ ಮರದಿಂದಲೇ ನಿರ್ಮಾಣಗೊಂಡಿವೆ. ಅರಮನೆಯ ಪ್ರತಿಯೊಂದು ಭಾಗವೂ ಕಲಾತ್ಮಕ ಕುಸುರಿ ಕೆತ್ತನೆಗಳಿಂದ ಕೂಡಿದೆ. 230 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಈ ಅರಮನೆಯ ಮರದ ವಸ್ತುಗಳು ಲವಲೇಶವೂ ಮುಕ್ಕಾಗಿಲ್ಲ.

ಈ ಭವ್ಯ ಮಹಲಿನ ದಕ್ಷಿಣ ಭಾಗದ ಗೋಡೆಯ ಮೇಲಿರುವ ಯುವರಾಜ ಟಿಪ್ಪುವಿನ ಮೂರು ಆಯಾದ ತೈಲಚಿತ್ರ, ಗಮನ ಸೆಳೆಯುತ್ತದೆ. ಇದನ್ನು ಬ್ರಿಟಿಷ್ ಕಲಾವಿದ ಜಾನ್ ಎಫ್. ಕೆರ್ರಿ 1792ರಲ್ಲಿ ಚಿತ್ರಿಸಿದ್ದಾನೆ ಎಂದು ಹೇಳಲಾಗುತ್ತದೆ. ಬ್ರಿಟಿಷ್ ಅಧಿಕಾರಿಗಳಾದ ಜನರಲ್ ಬೇಯರ್ಡ್, ಸಾರ್ಜೆಂಟ್ ಗ್ರಹಾಂ, ಕರ್ನಲ್ ಡನ್‌ಲಪ್ ಅವರ ಭಾವಚಿತ್ರಗಳು ಕೂಡ ಆಕರ್ಷಕವಾಗಿವೆ. ಒಳಭಾಗದಲ್ಲಿ 18 ಪೆನ್ಸಿಲ್ ಚಿತ್ರಗಳಿದ್ದು, ಇದರಲ್ಲಿ ಟಿಪ್ಪುವಿನ 7 ಮಕ್ಕಳ ಚಿತ್ರಗಳೂ ಸೇರಿವೆ.

ಈ ಎರಡಂತಸ್ತಿನ ಅರಮನೆಯನ್ನು 1957ರಲ್ಲಿ ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಗಿದೆ. ಏಕವ್ಯಕ್ತಿ ವಸ್ತು ಸಂಗ್ರಹಾಲಯ ಎಂದು ಕರೆಸಿಕೊಳ್ಳುವ ಈ ಸ್ಮಾರಕ



ಸದ್ಯ ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣ (ಎಎಸ್‌ಐ) ಸುಪರ್ದಿಯಲ್ಲಿದೆ. ಸ್ಮಾರಕದ ಒಳಭಾಗದಲ್ಲಿ ಟಿಪ್ಪು ಬಳಸುತ್ತಿದ್ದ ಬಿಚ್ಚುಗತ್ತಿ, ಕಠಾರಿ, ಒರೆಗತ್ತಿ, ಗುರಾಣಿ ಇತರ ಶಸ್ತ್ರಾಸ್ತ್ರಗಳನ್ನು ಇಡಲಾಗಿದೆ. ಆತ ಧರಿಸುತ್ತಿದ್ದ ವಸ್ತ್ರಗಳು, ಊಟದ ಪಾತ್ರೆಗಳು, ಅಂದು ಚಲಾವಣೆಯಲ್ಲಿದ್ದ ಅಸ್ರಫಿ ಇತರ ಹೆಸರಿನ ನಾಣ್ಯಗಳು ಹಾಗೂ ಪೀಠೋಪಕರಣಗಳನ್ನು ಸಂರಕ್ಷಿಸಿ ಇಡಲಾಗಿದೆ.

ಶ್ರೀರಂಗನಾಥಸ್ವಾಮಿ ದೇವಾಲಯದ ಪೂರ್ವಕ್ಕೆ, ಕಾವೇರಿ ನದಿಯ ಎಡಸೀಳಿನ ಬಲದಂಡೆಯಲ್ಲಿರುವ ಈ ಅರಮನೆ 16 ಎಕರೆ ವಿಸ್ತೀರ್ಣದ ಸುಂದರ ಉದ್ಯಾನವನದ ಮಧ್ಯೆ ಶೋಭಾಯಮಾನವಾಗಿದೆ. ಬೇಸಿಗೆ ಅರಮನೆಯ ಉತ್ತರ ಭಾಗದಿಂದ ನದಿಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದ್ದು, ನೂರಿನ್ನೂರು ವರ್ಷಗಳ ಅಪರೂಪದ ಮರಗಳು ಉದ್ಯಾನದ ಅಲ್ಲಲ್ಲಿ ಕಾಣಸಿಗುತ್ತವೆ. ಅರಮನೆಯ ಪ್ರವೇಶ ದ್ವಾರದ ಎಡ ಮತ್ತು ಬಲಭಾಗದಲ್ಲಿ ಒಂದೊಂದು ಡವ್ ಕೋಟ್‌ಗಳಿವೆ. ಅಂಚೆ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ಊರಿಂದ ಊರಿಗೆ, ರಾಜಧಾನಿಯಿಂದ ಸೇನಾ ನೆಲೆಗಳಿಗೆ ಅಂಚೆ ಪತ್ರಗಳನ್ನು ರವಾನಿಸಲು ತರಬೇತಿ ಪಡೆದ ಪಾರಿವಾಳಗಳನ್ನು ಬಳಸಲಾಗುತ್ತಿತ್ತು. ಅಂತಹ ಪಾರಿವಾಳಗಳಿಗೆ ಆಶ್ರಯ ನೀಡಲೆಂದೇ ಟಿಪ್ಪು ಕಾಲದಲ್ಲಿ ಈ ಡವ್ ಕೋಟ್‌ಗಳು ನಿರ್ಮಾಣಗೊಂಡಿದ್ದು, ಈಗಲೂ ಸುಸ್ಥಿತಿಯಲ್ಲಿವೆ.

***ಕೃಪೆ: ಗಣಂಗೂರು ನಂಜೇಗೌಡ***

## ನಗೆಹನಿ

ಗರ್ಭದಲ್ಲಿರುವ ಶಿಶು ನಾನು ಕೆಟ್ಟ ಪ್ರಪಂಚ ನೋಡುವುದಿಲ್ಲವೆಂದು ಚಳುವಳಿ ಮಾಡಿದರೆ?

ವೆರಿ ಸಿಂಪಲ್ ಗೊತ್ತಿದೆಯಲ್ಲ ನಮ್ಮ ಸಂಸ್ಕೃತಿ. ಚಾಕು-ಚೂರಿ-ಸಿಸೇರಿಯನ್ ಆಪರೇಶನ್ ಅಷ್ಟೆ. ಮುಂದೆಲ್ಲಾ ಸರಿ ಹೋಗುತ್ತೆ.





APRIL, 2017 MAHILA VISHESHA
Decl No. MAG (Declaration)/16/2016-17

# ಆತ್ಮೀಯ ಆಮಂತ್ರಣ ಪತ್ರಿಕೆ

***ಗಣ್ಯರಿಂದ ಕರ್ನಾಟಕ ಪ್ರೆಸ್ ಕೌನ್ಸಿಲ್ ಸಂಸ್ಥೆಯ ಉದ್ಘಾಟನೆ ಹಾಗೂ ವಿಸ್ಮಯ ಭಾರತ ಪಾಕ್ಷಿಕ ಪತ್ರಿಕೆ ಬಿಡುಗಡೆ ಸಮಾರಂಭ***

**ದಿ. 5-4-2017ರ ಬುಧವಾರ**

**ಸಮಯ: ಸಂಜೆ 5.30ರಿಂದ 7.30**

**ಸ್ಥಳ: ಭಟ್ ಹಾಲ್, ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಕಟ್ಟಡ, ಜೆಎಲ್‌ಬಿ ರಸ್ತೆ, ಮೈಸೂರು**



**ಕರ್ನಾಟಕ ಪ್ರೆಸ್ ಕೌನ್ಸಿಲ್ (ರಿ.)**

**ಸಂ. 1149, 'ಪ್ರಗತಿ', ರೈಲ್ವೆ ಸ್ಟೇಷನ್ ರಸ್ತೆ, ಚಾಮರಾಜಪುರಂ, ಮೈಸೂರು**

**ನೀವು ಬನ್ನಿ, ನಿಮ್ಮ ಸ್ನೇಹಿತರನ್ನು ಕರೆತನ್ನಿ**

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, Decl No. MAG (Declaration)/16/2016-17

ತೆರೆದ ಅಂಚೆ